Topexams

ಸಾಮಾನ್ಯ ಕನ್ನಡ | Hand Book

ಸ್ಪರ್ಧಾರ್ಥಿಗೊಂದು ಕೈಪಿಡಿ

The Best 2nd Edition



ಪರೀಕ್ಷೆಗೆ ಎಷ್ಟು ಬೇಕೋ ಅಷ್ಟೇ!

# ಸಾಮಾನ್ಯ ಕನ್ನಡ

ಅಭ್ಯಾಸವಾರು ಪ್ರಶ್ನೋತ್ತರಗಳೊಂದಿಗೆ ಕನ್ನಡ ವ್ಯಾಕರಣ, ಸಾಹಿತ್ಯ & ಕಾವ್ಯ ಮೀಮಾಂಸೆ

## FDA | SDA | GROUP C | K-TET | GPSTR | HSTR

PDO, KSET. VAO, CTO, ಅಬಕಾರಿ, ಕಡ್ಡಾಯ ಕನ್ನಡ ಪರೀಕ್ಷೆಯೊಂದಿಗೆ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಉಪಯುಕ್ತ

- ವ್ಯಾಕರಣ
- ಪದ ಸಂಪತ್ತು
- ಛಂದಸ್ಸು
- ಅಲಂಕಾರ
- ಸಾಹಿತ್ಯ
- ಕಾವ್ಯ ಮೀಮಾಂಸೆ

### KEY FEATURES

- ವಿಶೇಷ ಸಮನಾರ್ಥಕ ಪದಗಳು
- 3238 ಸಮನಾರ್ಥಕ ಪದಗಳು
- 641 ನಾನಾರ್ಥಕ ಪದಗಳು
- ವಿರುದ್ಧಾರ್ಥಕ ಪದಗಳು
- ಸಂಕುಚಿತ ಮತ್ತು ವಿಕಸಿತ ಪದಗಳು
- ಅಚ್ಚ-ಕನ್ನಡ ಪದಗಳನ್ನು ಗುರುತಿಸಲು ಸರಳ ವಿಧಾನ
- ಸಂಸ್ಕೃತ ಪದಗಳನ್ನು ಗುರುತಿಸಲು ಸರಳ ವಿಧಾನ
- ಅತಿ ಹೆಚ್ಚು ತತ್ಸಮ ಮತ್ತು ತದ್ಭವ ಪದಗಳ ಸಂಗ್ರಹ
- ಅತಿ ಮುಖ್ಯ ಅನ್ಯದೇಶಿಯ ಪದಗಳು
- 666 ನುಡಿಗಟ್ಟುಗಳು (ಖಚಿತ ಅಂಕಗಳು)
- ದ್ವಿರುಕ್ತಿ & ಜೋಡುನುಡಿಗಳ ಸಂಗ್ರಹ
- 13 ಪ್ರಕಾರದ ವಾಕ್ಯಗಳು
- ಅನುಕರಣಾವ್ಯಯಗಳ ಸಂಗ್ರಹ
- ಗ್ರಾಮ್ಯ ಮತ್ತು ಗ್ರಾಂಥಿಕ ಪದ-ಗುಚ್ಛ
- ಶುದ್ಧ ರೂಪಗಳು
- 1174 ಗಾದೆಮಾತುಗಳು

1000+ ಹಿಂದಿನ ಪರೀಕ್ಷೆಗಳ ಪ್ರಶ್ನೋತ್ತರಗಳೊಂದಿಗೆ ಅಭ್ಯಾಸ-ಪತ್ರಿಕೆ

ಪುಸ್ತಕದ ವಿಶೇಷತೆ

ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಉಪಯುಕ್ತ

6, 7, 8, 9, 10, 11,& 12ನೇ ತರಗತಿ 2025ರ ಪರಿಷ್ಕೃತ ಪಠ್ಯದ ಅತಿ ಮುಖ್ಯ ಮಾಹಿತಿ ಒಳಗೊಂಡಿದೆ.

KEA & KPSC ನೂತನ ಪಠ್ಯಕ್ರಮ ಆಧರಿಸಿ ರಚಿಸಲಾಗಿದೆ.



"ಕಳೆದುಕೊಂಡ ಮೇಲೆ ಅಳುವುದಕ್ಕಿಂತ, ಇರುವಾಗಲೇ ಪ್ರಯತ್ನಿಸುವುದು ಲೇಸು"

• ಸಂಜೀವ ವಿ ರಾಯ್ಕರ್

Unacademy Expert Educator



**ಪರೀಕ್ಷೆಗೆ ಎಷ್ಟು ಬೇಕೋ ಅಷ್ಟೇ!**

# ಸಾಮಾನ್ಯ ಕನ್ನಡ



**FDA | SDA | GROUP C | K-TET | GPSTR | HSTR**


KPTCL, CTO, PDO, KSET, ಅಬಕಾರಿ, VAO

ಕಡ್ಡಾಯ ಕನ್ನಡ ಪರೀಕ್ಷೆಯೊಂದಿಗೆ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಉಪಯುಕ್ತ

**Topexams Publications**

VRS Edu Foundation, Davangere 577006

Mobile: 8880015000




**Topexams ಸಾಮಾನ್ಯ ಕನ್ನಡ**

**Topexams Samanya Kannada** - Written by: Sanjeeva Vishwanatha Raykar
Published by: **VRS EDU FOUNDATION (R) Topexams Publication**
Devaraj URS Layout, C Block Davangere -577006


| | | | |
|---|---|---|---|
| ಪ್ರಥಮ ಮುದ್ರಣ | : 2023 | ದ್ವಿತೀಯ ಮುದ್ರಣ: | 2025 |
| ಒಟ್ಟು ಪುಟಗಳು | : 485+11 | | |
| ಹಕ್ಕುಗಳು | : **ಸಂಜೀವ ವಿಶ್ವನಾಥ ರಾಯ್ಕರ (ಸಂಪಾದಕರದ್ದು)** | | |
| ಕಾಗದ ಬಳಕೆ | : 60 ಜಿ.ಎಸ್.ಎಂ ಮ್ಯಾಪಿಲಿಥೋ | | |
| ಪುಸ್ತಕದ ಬೆಲೆ | : 460/- | | |


**ಸೂಚನೆ:** ಆತ್ಮೀಯ ಸ್ಪರ್ಧಾರ್ಥಿಗಳೇ ಈ ಕೈಪಿಡಿಯನ್ನು ಪ್ರಕಟಿಸುವಾಗ ಸಂಪಾದಕರು ಸಾಕಷ್ಟು ಎಚ್ಚರವಹಿಸಿ ಸ್ಪಷ್ಟ ಹಾಗೂ ಸರಿಯಾದ ಮಾಹಿತಿಯನ್ನು ನೀಡಿದ್ದಾರೆ. ಆದಾಗಿಯೂ ತಾರ್ಕಿಕವಾಗಿ ಅಥವಾ ತಾಂತ್ರಿಕವಾಗಿ ಯಾವುದಾದರೂ ಲೋಪದೋಷಗಳು ಕಂಡುಬಂದಲ್ಲಿ ಕ್ಷಮೆ ಇರಲಿ. **ಲೋಪದೋಷಕ್ಕೆ ಸಲಹೆ ಸೂಚನೆ ನೀಡಲು ಸಂಪರ್ಕಿಸಿ** whatsapp **ನಂ: 88800-15000**

## ಅಧೀಕೃತ ಮಾರಾಟಗಾರರು

**Topexams Publication**
**Davanagere: 88800-15000**

# ಅರ್ಪಣೆ



**ಪೂಜ್ಯ ತಂದೆಯವರಾದ**

**ಶ್ರೀ ವಿಶ್ವನಾಥ್ ರಾಯಶೇಟ್ ರಾಯ್ಕರ್**

# ಪರಿವಿಡಿ


| ಕ್ರ.ಸಂ | ವಿಷಯವಸ್ತು | ಪುಟ ಸಂಖ್ಯೆ |
|---|---|---|
| | **ವ್ಯಾಕರಣ ವಿಭಾಗ** | |
| 1. | **ಕನ್ನಡದ ಪ್ರಮುಖ ವೈಯಾಕರಣಿಗಳು** | 1 - 8 |
| | 2ನೇ ನಾಗವರ್ಮ, ಕೇಶಿರಾಜ, ಭಟ್ಟಾಕಳಂಕದೇವ, ಸಂಸ್ಕೃತ ಒಂದು ಮೃತ ಭಾಷೆಯೇ?<br>ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದ ಪ್ರಮುಖ ಕೃತಿಗಳು | |
| 2. | **ಅಕ್ಷರಮಾಲೆ/ವರ್ಣಮಾಲೆ** | 9 - 18 |
| | 1. ಸ್ವರಗಳು \| 2. ವ್ಯಂಜನಗಳು \| 3. ಯೋಗವಾಹಗಳು \| 4. ಗುಣಿತಾಕ್ಷರಗಳು | |
| | 5. ಸಂಯುಕ್ತಾಕ್ಷರಗಳು \| 6. ಅಕ್ಷರಗಳು ಹುಟ್ಟುವ ಧ್ವನಿ ಸ್ಥಾನಗಳು \| 7. Short-Notes | |
| 3. | **ಪದಗಳು** | 19 - 23 |
| | • ನಾಮಪದ \| • ಅವ್ಯಯ \| • ಪ್ರತ್ಯಯ \| • ಪ್ರಾತಿಪದಿ/ನಾಮಪ್ರಕೃತಿ | |
| | • ಕ್ರಿಯಾಪದ \| • ಪ್ರಕೃತಿ \| • ಶಬ್ದ/ ಪದ \| • ಧಾತು/ಕ್ರಿಯಾಪ್ರಕೃತಿ | |
| | • ಜಾತಿ ಭೇದದಿಂದ ಬಂದ ಶಬ್ದಗಳು \| • ರೂಪಭೇದದಿಂದ ಬಂದ ಶಬ್ದಗಳು | |
| | • ಅರ್ಥಭೇದದಿಂದ ಬಂದ ಶಬ್ದಗಳು | |
| 4. | **ನಾಮಪದಗಳು** | 24 - 33 |
| | 1. ವಸ್ತುವಾಚಕ / ನಾಮವಾಚಕ \| 2. ಗುಣವಾಚಕ \| 3. ಸಂಖ್ಯಾವಾಚಕ | |
| | 4. ಸಂಖ್ಯೇಯವಾಚಕ \| 5. ಭಾವನಾಮ \| 6. ಪರಿಮಾಣವಾಚಕ | |
| | 7. ಪ್ರಕಾರವಾಚಕ \| 8. ಭಾವನಾಮ \| 9. ಸರ್ವನಾಮ | |
| 5. | **ಲಿಂಗಗಳು** | 34 - 39 |
| 6. | **ವಚನಗಳು** | 40 - 43 |
| 7. | **ವಿಭಕ್ತಿ ಪ್ರತ್ಯಯ** | 44 - 48 |
| | • ನಾಮವಿಭಕ್ತಿಗಳು \| • ದೋಷಗಳು \| • ವಿಭಕ್ತಿ ಪಲ್ಲಟ | |
| 8. | **ಕ್ರಿಯಾಪದ** | 49 - 62 |
| | • ಧಾತುಗಳಲ್ಲಿ ವಿಧಗಳು \| • ಪ್ರೇರಣಾರ್ಥಕ ಧಾತುಗಳು \| • ಸಕರ್ಮಕ & ಅಕರ್ಮಕ | |
| | • ಕಾಲರೂಪ ಕ್ರಿಯಾಪದ \| • ಅರ್ಥರೂಪ ಕ್ರಿಯಾಪದಗಳು \| • ಸಾಪೇಕ್ಷ ಕ್ರಿಯಾರೂಪಗಳು | |
| | • ಕರ್ತರಿ ಮತ್ತು ಕರ್ಮಣಿ ಪ್ರಯೋಗಗಳು | |
| 9. | **ಕೃದಂತ ಅಥವಾ ಕೃನ್ನಾಮ** | 63 - 66 |
| | 1. ಕೃದಂತ ನಾಮಗಳು \| 2. ಕೃದಂತ ಭಾವನಾಮಗಳು \| 3. ಕೃದಂತ ಅವ್ಯಯಗಳು | |
| 10. | **ತದ್ಧಿತಾಂತ** | 67 - 71 |
| | 1. ತದ್ಧಿತಾಂತ ನಾಮಗಳು \| 2. ತದ್ಧಿತಾಂತ ಭಾವನಾಮಗಳು \| 3. ತದ್ಧಿತಾಂತ ಅವ್ಯಯಗಳು | |
| 11. | **ಅವ್ಯಯಗಳು** | 72 - 76 |
| | 1. ಸಾಮಾನ್ಯ ಅವ್ಯಯಗಳು \| 2. ಕ್ರಿಯಾರ್ಥಕಾವ್ಯಯಗಳು \| 3. ಕೃದಂತ ಅವ್ಯಯಗಳು | |

| | | | | | | |
|---|---|---|---|---|---|---|
| | 4. ತದ್ಧಿತಾಂತ ಅವ್ಯಯಗಳು | | 5. ಸಂಬಂಧಾರ್ಥಕಾವ್ಯಗಳು | | 6.ಅವಧಾರಣಾರ್ಥಕಾವ್ಯಯಗಳು | |
| | 7. ಅನುಕರಣಾವ್ಯಯಗಳು | | 8. ಭಾವಸುಚಕಾವ್ಯಗಳು | | 9. ಕೃತಜ್ಞತೆಗಳು | |
| 12. | **ಸಂಧಿಗಳು** | | | | | 77 - 99 |
| | • ಕನ್ನಡ ಸಂಧಿಗಳು (3) | | • ಸಂಸ್ಕೃತ ಸಂಧಿ (11) | | | |
| | 1. ಲೋಪ ಸಂಧಿ | 3. ಆದೇಶ ಸಂಧಿ | 1. ಸವರ್ಣದೀರ್ಘ ಸಂಧಿ | | | |
| | 2. ಆಗಮ ಸಂಧಿ | | 2. ಗುಣಸಂಧಿ | | 7. ಪ್ಲುತ್ವ ಸಂಧಿ | |
| | 1. ಪ್ರಕೃತಿ ಭಾವ | | 3. ವೃದ್ಧಿಸಂಧಿ | | 8. ಛತ್ವ ಸಂಧಿ | |
| | 2. ಅವಳಿ–ಜವಳಿ ಸಂಧಿಗಳು (ಪುಟ ಸಂ. 74) | | 4. ಯಣ್ ಸಂಧಿ | | 9. 'ಲ'ಕಾರ ದ್ವಿತ್ವ ಸಂಧಿ | |
| | 3. ವಿಸಂಧಿ/ವಿಕಲ್ಪಸಂಧಿ (ಪುಟ ಸಂ. 85) | | 5. ಜಶ್ತ್ವಸಂಧಿ | | 10. ಅನುನಾಸಿಕ ಸಂಧಿ | |
| | 4. ಶಿಥಿಲದ್ವಿತ್ವ ಸಂಧಿ (ಪುಟ ಸಂ. 91) | | 6. ಶ್ಚುತ್ವ ಸಂಧಿ | | 11. ವಿಸರ್ಗ ಸಂಧಿ | |
| 13. | **ಸಮಾಸ ಪ್ರಕರಣ** | | | | | 100 - 112 |
| | 1. ಅರಿಸಮಾಸ | 2. ತತ್ಪುರುಷ | 3. ಕರ್ಮಧಾರಯ | 4. ದ್ವಿಗು | 5. ಗಮಕ | |
| | 6. ಕ್ರಿಯಾ | 7. ಅಂಶಿಸಮಾಸ | 8. ದ್ವಂದ್ವ ಸಮಾಸ | 9. ಬಹುವ್ರೀಹಿ ಸಮಾಸ | | |
| 14. | **ವಾಕ್ಯಗಳು ಮತ್ತು ವಾಕ್ಯ ನಿಯಮ** | | | | | 113 - 119 |
| | • ಆಧ್ಯಾಹಾರ | | • ರೂಪನಿಷ್ಪತ್ತಿ | | • ಮಿಶ್ರವಾಕ್ಯ | |
| | • ಸಾಮಾನ್ಯ ವಾಕ್ಯ | | • ಸಂಯೋಜಿತ ವಾಕ್ಯ | | 7. ಕ್ರಿಯಾತ್ಮಕ ವಾಕ್ಯ | |
| | 1. ವೈಷಯಿಕ ವಾಕ್ಯ | | 4. ತಥ್ಯವಿಷಯಕ ವಾಕ್ಯ | | 8. ನಿಷೇಧಾತ್ಮಕವಾಕ್ಯ | |
| | 2. ಪ್ರೇರಕವಾಕ್ಯ | | 5. ವೈಕಲ್ಪಿತವಾಕ್ಯ | | 9. ಪ್ರಸ್ತಾವನಾ ವಾಕ್ಯ | |
| | 3. ವೈಚಾರಿಕ ವಾಕ್ಯ | | 6. ಅನುಗತವಾಕ್ಯ | | 10. ಕ್ರಿಯಾವಾಕ್ಯ | |
| 15. | **ಲೇಖನ ಚಿಹ್ನೆಗಳು** | | | | | 120 - 130 |
| | 1. ಪೂರ್ಣವಿರಾಮ ಚಿಹ್ನೆ | | 5. ಭಾವಸೂಚಕ ಚಿಹ್ನೆ | | 9. ಅಧಿಕ ಚಿಹ್ನೆ | |
| | 2. ಅರ್ಧವಿರಾಮ ಚಿಹ್ನೆ | | 6. ವಾಕ್ಯವೇಷ್ಟನ ಚಿಹ್ನೆ | | 10. ಸಮಾನಾರ್ಥಕ ಚಿಹ್ನೆ | |
| | 3. ಅಲ್ಪವಿರಾಮ ಚಿಹ್ನೆ | | 7. ಆವರಣ ಚಿಹ್ನೆ | | | |
| | 4. ಪ್ರಶ್ನಾರ್ಥಕ ಚಿಹ್ನೆ | | 8. ವಿವರಣಾತ್ಮಕ ಚಿಹ್ನೆ | | | |
| | **ಛಂದಸ್ಸು ವಿಭಾಗ** | | | | | |
| 1. | **ಛಂದಸ್ಸಿನ ಪಾರಿಭಾಷಿಕ ಪದಗಳು:**<br>ಲಯ, ಯತಿ, ಪ್ರಾಸ, ಗಣ, ಪಾದ, ವಡಿ, ಮಾತ್ರೆ, ಪ್ರಸ್ತಾರ ಕ್ರಮ | | | | | 131 - 154 |
| | **ಅಕ್ಷರ ಗಣದ ಬಂಧಗಳು:**<br>ಅಕ್ಷರಗಣದ ಖ್ಯಾತ ಕರ್ನಾಟಕ ವೃತ್ತರಗಳು | | | | | |
| | **ಮಾತ್ರಾಗಣದ ಬಂಧಗಳು** | | | | | |
| | **ಅಂಶಗಣದ ಬಂಧಗಳು** | | | | | |
| | **ಹೊಸಗನ್ನಡ ಛಂದಸ್ಸಿನ ಮಟ್ಟುಗಳು** | | | | | |

| | | | | |
|---|---|---|---|---|
| **ಅಲಂಕಾರ ವಿಭಾಗ** | | | | |
| 1. | 1. ಅನುಪ್ರಾಸ | 2. ಯಮಕಾಲಂಕಾರ | 3. ಚಿತ್ರ ಕವಿತ್ವ | 155 - 164 |
| | 4. ಉಪಮಾಲಂಕಾರ | 5. ರೂಪಕಾಲಂಕಾರ | 6. ಅರ್ಥಾಂತರನ್ಯಾಸಾಲಂಕಾರ | |
| | 7. ದೃಷ್ಟಾಂತಾಲಂಕಾರ | 8. ಉತ್ಪ್ರೇಕ್ಷಾಲಂಕಾರ | 9. ಶ್ಲೇಷಾಲಂಕಾರ | |

| | | |
|---|---|---|
| **ಭಾಷಾ ವಿಭಾಗ** | | |
| 1. | **ವಿಶೇಷ ಸಮನಾರ್ಥಕ ಪದಗಳು** | 165 - 167 |
| 2. | **ಸಮನಾರ್ಥಕ ಪದಗಳು** | 168 - 204 |
| 3. | **ನಾನಾರ್ಥಕ ಪದಗಳು** | 205 - 211 |
| 4. | **ವಿರುದ್ಧಾರ್ಥಕ ಪದಗಳು** | 212 - 225 |
| 5. | **ದೇಶಿಯ ಅಥವಾ ಅಚ್ಚ ಕನ್ನಡ ಶಬ್ದಗಳು** | 226 - 228 |
| 6. | **ಸಂಸ್ಕೃತ ಪದಗಳು** | 229 - 232 |
| 7. | **ಸಂಸ್ಕೃತ & ತತ್ಸಮ-ತದ್ಭವ ಪದಗಳು** | 233 - 252 |
| 8. | **ಅನ್ಯದೇಶಿಯ ಪದಗಳು** | 253 - 256 |
| 9. | **ನುಡಿಗಟ್ಟು ಅಥವಾ ಪಡೆನುಡಿಗಳು** | 257 - 268 |
| 10. | **ಸಂಕುಚಿತ & ವಿಕಸಿತ ಪದಗಳು** | 269 - 269 |
| 11. | **ದ್ವಿರುಕ್ತಿಗಳು ಪದಗಳು** | 270 - 271 |
| 12. | **ಜೋಡುನುಡಿ/ಮಾತಿಗೊಂದು ಗೀತು** | 272 - 274 |
| 13. | **ಅನುಕರಣಾವ್ಯಯ** | 275 - 275 |
| 14. | **ಗ್ರಾಮ್ಯ & ಗ್ರಾಂಥಿಕ ಪದಗಳು** | 276 - 276 |
| 15. | **ಶುದ್ಧ ಮತ್ತು ಅಶುದ್ಧ ಶಬ್ದಗಳ ರೂಪಗಳು** | 277 - 282 |
| 16. | **ಗಾದೆಮಾತು** | 283 - 299 |
| 17. | **ಒಗಟುಗಳು** | 300 - 304 |
| 18. | **ಪತ್ರಲೇಖನ** | 305 - 307 |

| | | | |
|---|---|---|---|
| **ಸಾಹಿತ್ಯ ವಿಭಾಗ** | | | |
| 1. | **ಕನ್ನಡ ಸಾಹಿತ್ಯ Short Notes** | | 308 - 330 |
| | 1. **6-12** ಪಠ್ಯದ ಕನ್ನಡ ಕವಿಗಳು & ಸಾಹಿತಿಗಳು | 9. ಅಭಿನಂದನಾ ಗ್ರಂಥಗಳು | |
| | 2. ವಿಮರ್ಶಾ ಕೃತಿಗಳು | 10. ಭಾರತದ ಪ್ರಮುಖ ಪ್ರಶಸ್ತಿ ಪಡೆದ ಕನ್ನಡಿಗರು | |
| | 3. ಕಾದಂಬರಿಕಾರರು ಹಾಗೂ ಕಾದಂಬರಿಗಳು | 11. ಪ್ರವಾಸ ಕಥನಗಳು | |
| | 4. ಪ್ರಮುಖ ನಾಟಕಕಾರರು ಹಾಗೂ ನಾಟಕಗಳು | 12. ಕನ್ನಡ ಸಾಹಿತಿಗಳ ಆತ್ಮ ಚರಿತ್ರೆಗಳು / ಆತ್ಮ ಕಥೆ | |
| | 5. ಪ್ರಬಂಧಕಾರರು ಅವರ ಪ್ರಮುಖ ಪ್ರಬಂಧ ಕೃತಿಗಳು | 13. ಕಾದಂಬರಿ, ಕಾವ್ಯಗಳಲ್ಲಿ ಬರುವ ಪ್ರಮುಖ ಪಾತ್ರಗಳು | |
| | 6. ಜೀವನ ಚರಿತ್ರೆಯ ಕೃತಿಗಳು | 14. ಕರ್ನಾಟಕ ಅಥವಾ ಕನ್ನಡದ ಸಾಮಾನ್ಯ-ಜ್ಞಾನ | |

| | | | | | |
|---|---|---|---|---|---|
| | 7. ಕನ್ನಡದ ಪ್ರಸಿದ್ಧ ಪತ್ರಿಕೆಗಳು | | 15. ಕನ್ನಡದ ಹೆಸರಾಂತ ಬಿರುದಾಂಕಿತರು | | |
| | 8. ಸಾಹಿತಿಗಳು ಹಾಗೂ ಅವರ ಕಾವ್ಯನಾಮ | | | | |
| 2. | **ದ್ರಾವಿಡ ಭಾಷೆ & ಕನ್ನಡ ಭಾಷೆಯ ಹುಟ್ಟು** | | | | 331 - 334 |
| 3. | **ಕನ್ನಡ ಭಾಷಾ ಚರಿತ್ರೆಯ ಕುರುಹುಗಳು** | | | | 335 - 338 |
| | • ಕನ್ನಡದ ರಾಜಮನೆತನಗಳು | | • ಕನ್ನಡದ ಕವಿ, ಕೃತಿ & ಆಶ್ರಯದಾತರು | | |
| 4. | **ಕನ್ನಡ ಶಾಸನ ಸಾಹಿತ್ಯ** | | | | 339 - 353 |
| | • ಶಾಸನಗಳ ಅಧ್ಯಯನ | • ದಾನ ಶಾಸನ | • ವೀರಗಲ್ಲು | | |
| | • ಪ್ರಶಸ್ತಿ ಶಾಸನಗಳು | • ಮಾಸ್ತಿ ಕಲ್ಲುಗಳು | • ನಿಷದಿ ಕಲ್ಲುಗಳು | | |
| | • ಕೂಟ ಶಾಸನಗಳು | • ಯೂಪ ಶಾಸನಗಳು | • ಡಿ.ಎಲ್.ಎನ್ & ಹಸ್ತಪ್ರತಿ | | |
| | 1. ಹಲ್ಮಿಡಿ ಶಾಸನ | 2. ಬಾದಾಮಿ ಶಾಸನ | 3. ತಮಟಕಲ್ಲು ಶಾಸನ | | |
| | 4. ಐಹೊಳೆ ಶಾಸನ | 5. ಶ್ರವಣಬೆಳಗೊಳದ ಶಾಸನ | 6. ಗಂಗಾಧರಂ ಶಾಸನ | | |
| | 7. ಬೆಳತೂರು ದೇಕಬ್ಬೆ ಶಾಸನ | 8. ನಂದಿ ಸೇನನ ಶಾಸನ | 9. ಅರ್ಜುನವಾಡ ಶಾಸನ | | |
| | 10. ಲಕ್ಕುಂಡಿ ಶಾಸನ | 11. ಆತಕೂರು ಶಾಸನ | 12. ಬೇಲೂರು ಶಾಸನ | | |
| | 13. ಕುವರ ಲಕ್ಷ್ಮಣನ ಶಾಸನ | 14. ಚಂದ್ರವಳ್ಳಿ ಶಾಸನ | 15. ಆಲಂಪುರ ತಾಮ್ರ ಶಾಸನ | | |
| | 16. ಬೆಳ್ಮಣ್ಣು ತಾಮ್ರ ಶಾಸನ | 17. ತಾಳಗುಂದ ಶಾಸನ | 18. ವಡ್ಡರ್ಸೆ ಶಾಸನ | | |
| | 19. ಜುರಾ ಪ್ರಶಸ್ತಿ ಶಾಸನ | 21. ಸಿಂಗೆನಾಯಕನಹಳ್ಳಿ ಶಾಸನ | 22. ಕೆರೆಸಂತೆ ಶಾಸನ | | |
| 5. | **ಕನ್ನಡ ಸಾಹಿತ್ಯ ಚರಿತ್ರೆಯ ಕಾಲಘಟ್ಟಗಳು** | | | | 354 - 355 |
| 6. | **ಕನ್ನಡ ಸಾಹಿತ್ಯ ಪ್ರಕಾರಗಳು** | | | | 356 – 363 |
| | • ಚಂಪೂ ಕಾವ್ಯ | • ಶತಕ | • ಕಥನಕಾವ್ಯ | • ಸಣ್ಣ ಕಥೆ | |
| | • ಮಹಾಕಾವ್ಯ | • ರಗಳೆ | • ನಾಟಕ (ಡ್ರಾಮಾ) | • ವಿಮರ್ಶೆ | |
| | • ತ್ರಿಪದಿ | • ಷಟ್ಪದಿ | • ಕಾದಂಬರಿ (ನಾವೆಲ್) | • ಸಂಶೋಧನೆ | |
| | • ಕಂದ ಪದ್ಯ | • ಜಾನಪದ ಕಾವ್ಯ | • ಲಲಿತ ಪ್ರಬಂಧ | | |
| | • ಸಾಂಗತ್ಯ | • ಭಾವಗೀತೆ | • ಖಂಡಕಾವ್ಯ | | |
| 7. | **ಪೂರ್ವ ಹಳಗನ್ನಡ/ಪಂಪ ಪೂರ್ವ ಯುಗ** | | | | 364 - 371 |
| | • ದುರ್ವಿನೀತ | • ತುಂಬಲೂರಾಚಾರ್ಯ | • ಶ್ರೀವಿಜಯ | | |
| | • ಅಸಗ | • ಶ್ಯಾಮಕುಂದಾಚಾರ್ಯ | • ಶಿವಕೋಟ್ಯಾಚಾರ್ಯ | | |
| | • ಗುಣನಂದಿ | • ಸೈಗೊಟ್ಟ ಶಿವಕುಮಾರ | • ಗುಣವರ್ಮ–1 | | |
| 8. | **ಹಳಗನ್ನಡ ಸಾಹಿತ್ಯ/ಪಂಪ ಯುಗ** | | | | 372 - 386 |
| | • ಪಂಪ | • ದುರ್ಗಸಿಂಹ | • ನಯಸೇನ | • ಕರ್ಣಪಾರ್ಯ | |
| | • ಪೊನ್ನ | • ಶಾಂತಿನಾಥ | • ನಾಗವರ್ಮ 2 | • ರನ್ನ | |
| | • ಚಾವುಂಡರಾಯ | • ನಾಗಚಂದ್ರ | • ನಾಗವರ್ಮ–1 | • ಜನ್ನ | |

| | | | | | |
|---|---|---|---|---|---|
| 9. | **ನಡುಗನ್ನಡ ಚಂಪೂ ಸಾಹಿತ್ಯ** | | | | 387 – 400 |
| | • ಬ್ರಹ್ಮಶಿವ | • ರುದ್ರಭಟ್ಟ | • ಹರಿಹರ | • ರಾಘವಾಂಕ | |
| | • ನೇಮಿಚಂದ್ರ | • ಆಂಡಯ್ಯ | • ನಿಜಗುಣ ಶಿವಯೋಗಿ | • ದೇಪರಾಜ | |
| | • ಕುಮಾರವ್ಯಾಸ | • ಚಾಮರಸ | • ಲಕ್ಷ್ಮೀಶ | • ನಂಜುಂಡ | |
| | • ರತ್ನಾಕರವರ್ಣಿ | • ಮುದ್ದಣ್ಣ | | | |
| 10. | **ನಡುಗನ್ನಡ – ವಚನ ಸಾಹಿತ್ಯ** | | | | 401 – 409 |
| | • ಜೇಡರ ದಾಸಿಮಯ್ಯ | • ಅಲ್ಲಮ ಪ್ರಭು | • ಬಸವಣ್ಣ | • ಅಕ್ಕಮಹಾದೇವಿ | |
| | • ಸಿದ್ದರಾಮ | • ಚೆನ್ನಬಸವಣ್ಣ | • ಅಂಬಿಗರ ಚೌಡಯ್ಯ | • ಸರ್ವಜ್ಞ | |
| | • ಸಂಚಿ ಹೊನ್ನಮ್ಮ | • 50 ವಚನಕಾರರ ಅಂಕಿತ–ನಾಮಗಳು | | | |
| 11. | **ನಡುಗನ್ನಡ ದಾಸ ಸಾಹಿತ್ಯ** | | | | 410 – 415 |
| | • ನರಹರಿತೀರ್ಥ | • ಶ್ರೀಪಾದ ರಾಯ | • ವ್ಯಾಸರಾಯ | • ವಾದಿರಾಜ | |
| | • ಪುರಂದರದಾಸ | • ಕನಕದಾಸರು | • ಜಗನ್ನಾಥದಾಸ | • ಮಹಿಪತಿ ದಾಸ | |
| | • ವಿಜಯದಾಸರು | • ಗೋಪಾಲದಾಸರು | • ದಾಸರ ಪ್ರಮುಖ ಉಕ್ತಿಗಳು | | |
| 12. | **ಆಧುನಿಕ ಕನ್ನಡ ಸಾಹಿತ್ಯ** | | | | 416 – 437 |
| | 1. ನವೋದಯ ಸಾಹಿತ್ಯ | | 2. ಪ್ರಗತಿಶೀಲ ಸಾಹಿತ್ಯ | | |
| | 3. ನವ್ಯ ಸಾಹಿತ್ಯ | | 4. ದಲಿತ/ ಬಂಡಾಯ ಸಾಹಿತ್ಯ | | |
| 13. | **ಕನ್ನಡದ ಮಹಿಳಾ ಸಾಹಿತಿಗಳು** | | | | 438 – 449 |
| 14. | **ಕನ್ನಡ & ಕರ್ನಾಟಕದ 310 ಪ್ರಥಮಗಳು** | | | | 450– 461 |
| 15. | **ಸಾಹಿತ್ಯಕ್ಕೆ ನೀಡುವ ಪ್ರಮುಖ ಪ್ರಶಸ್ತಿಗಳು** | | | | 462 – 472 |
| | • ಕನ್ನಡದ ಜ್ಞಾನಪೀಠ ಪ್ರಶಸ್ತಿ | | • ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ | | |
| | • ಪಂಪ ಪ್ರಶಸ್ತಿ | | • ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ | | |
| | • ಕರ್ನಾಟಕ ರತ್ನ ಪ್ರಶಸ್ತಿ | | • ನೃಪತುಂಗ ಸಾಹಿತ್ಯ ಪ್ರಶಸ್ತಿ | | |
| | • ಸರಸ್ವತಿ ಸಮ್ಮಾನ | | • ಹೊಸಗನ್ನಡ ಕವಿ ಅಥವಾ ಲೇಖಕರ ಉಕ್ತಿಗಳು | | |
| 16. | **ಭಾರತೀಯ ಕಾವ್ಯ ಮೀಮಾಂಸೆ** | | | | 473 - 485 |
| | **ಭಾಗ** – 1 ಪರಿಚಯ, ಕಾವ್ಯಮೀಮಾಂಸಾಕಾರರು ಹಾಗೂ ಅವರ ಗ್ರಂಥಗಳು, ಕನ್ನಡ ಕಾವ್ಯ ಮೀಮಾಂಸಕಾರರು, ಆಧುನಿಕ ಕಾವ್ಯ ಮೀಮಾಂಸಕಾರರು | | | | |
| | **ಭಾಗ** – 2 ಕಾವ್ಯ ಮೀಮಾಂಸೆಯ ಪ್ರಸಿದ್ಧ ಉಕ್ತಿಗಳು & ಮೀಮಾಂಸಕಾರ, ಸಿದ್ಧಾಂತ/ ತತ್ವವನ್ನು ಪ್ರತಿಪಾದಿಸಿದ ಲಾಕ್ಷಣಿಕ/ ವಿದ್ವಾಂಸರು | | | | |
| | **ಭಾಗ** – 3 ಕಾವ್ಯ ಮೀಮಾಂಸೆಯ ಪ್ರಮುಖ ಘಟ್ಟಗಳು ರಸ, ಅಲಂಕಾರ, ರೀತಿ, ಧ್ವನಿ, ವಕ್ರೋಕ್ತಿ, ಔಚಿತ್ಯ | | | | |

## ಪ್ರಥಮ ದರ್ಜೆ ಸಹಾಯಕ ಆಯ್ಕೆ ಪರೀಕ್ಷೆ ಸಾಮಾನ್ಯ ಕನ್ನಡ – FDA Question Pattern Analysis

2017 ರಿಂದ 2021ರ ವರೆಗಿನ ದ್ವಿತಿಯ ದರ್ಜೆ ಸಹಾಯಕರ ಸ್ಪರ್ಧಾತ್ಮಕ ಆಯ್ಕೆ ಪರೀಕ್ಷೆಯ ಪ್ರಥಮ ಪತ್ರಿಕೆ ಸಾಮಾನ್ಯ ಕನ್ನಡ ಪತ್ರಿಕೆಯಲ್ಲಿನ ಪ್ರಶ್ನೆಗಳು ಈ ಕೆಳಕ ವಿಶ್ಲೇಷಿಸಿದ ರೀತಿಯಲ್ಲಿ ನೀಡಲಾಗಿದ್ದು **FDA** ಪರೀಕ್ಷೆಗೆ ತಯಾರಿ ನಡೆಸುತ್ತಿರುವ ಅಭ್ಯರ್ಥಿಗಳು ಈ ಕೆಳಗಿನ ವಿಶ್ಲೇಷಣೆಯನ್ನು ಗಮನದಲ್ಲಿಟ್ಟುಕೊಂಡು ತಮ್ಮ ಪರೀಕ್ಷಾ ತಯಾರಿಯನ್ನು ಮಾಡಿ.

| ಕ್ರ.ಸಂ | ವಿಷಯಾನುಕ್ರಮಣಿಕೆ | 2017 | 2018 | 2019 | 2021 |
|---|---|---|---|---|---|
| 1 | ಸಮನಾರ್ಥಕ ಅಥವಾ ಸಮಿಪದ ಅರ್ಥವುಳ್ಳರೂಪ ಗುರುತಿಸಿ. | 9 | 9 | 9 | 10 |
| 2 | ವಿರುದ್ಧಾರ್ಥಕ ಪದವನ್ನು ಬರೆಯಿರಿ. | 8 | 8 | 8 | 10 |
| 3 | ನುಡಿಗಟ್ಟಿನ ಅರ್ಥವಿವರಿಸುವ ರೂಪವನ್ನು ಆಯ್ಕೆಮಾಡಿ. | 10 | 5 | 5 | 9 |
| 4 | ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ. | 6 | 5 | 5 | 4 |
| 5 | ಗೆರೆಎಳೆದ ಪದ ತಪ್ಪಾಗಿದ್ದರೆ ಸರಿಯಾದ ಪದ ಗುರುತಿಸಿ. ತಪ್ಪಿಲ್ಲದಿದ್ದರೆ ಸುಧಾರಣೆ ಬೇಕಿಲ್ಲ ಎಂದು ಗರುತಿಸಿ. | 7 | 6 | 6 | 9 |
| 6 | ಖಾಲಿಬಿಟ್ಟ ಜಾಗವನ್ನು ಸರಿಯಾದ ಉತ್ತರದಿಂದ ತುಂಬಿರಿ. | 25 | 35 | 27 | 39 |
| 7 | ಅನ್ಯಭಾಷಾಪದವನ್ನು ಆರಿಸಿ ಬರೆಯಿರಿ / ಗುರುತಿಸಿ. | - | 4 | 4 | 2 |
| 8 | ದೋಷಗುರುತಿಸಿ ಸರಿಯಾದ ಪದ ಆರಿಸಿ ಇಲ್ಲವೆ, ಸುಧಾರಣೆ ಬೇಕಿಲ್ಲ ಎಂದು ಗರುತಿಸಿ. | 3 | 3 | 3 | |
| 9 | ತಪ್ಪಾದ ಪದದ ಸರಿಯಾದ ಉತ್ತರವನ್ನು ಗುರುತಿಸಿ. (ಸಾಹಿತ್ಯ) | 5 | 5 | 5 | |
| 10 | PQRS ಅರ್ಥಪೂರ್ಣವಾಗಿ ಜೋಡಿಸಿ ಬರೆಯಿರಿ. | 8 | 5 | 5 | 6 |
| 11 | ವ್ಯಾಕರಣ ಅಥವಾ ಕಾಗುಣಿತ ದೋಷವುಳ್ಳ ಪದ ಗುರುತಿಸಿ. | 6 | 6 | 6 | |
| 12 | ಸ್ಥಾನಪಲ್ಲಟವಾದ ಪದಗಳನ್ನು ಅರ್ಥಪೂರ್ಣವಾಗಿ ಜೋಡಿಸಿ. | 6 | 4 | 4 | |
| 13 | ಇಂಗ್ಲೀಷ ರೂಪಕ್ಕೆ ಸೂಕ್ತವಾದ ಪದವನ್ನು ಆರಿಸಿ ಬರೆಯಿರಿ. | 6 | 5 | 5 | 6 |
| 14 | ಸಾಹಿತ್ಯದ ಮೇಲಿನ ನೇರ ಪ್ರಶ್ನೆಗಳು. | | | 8 | |
| 15 | ತತ್ಸಮ ತದ್ಭವ ಪದಗಳನ್ನು ಬರೆಯಿರಿ. | | | | 5 |
| | **ವ್ಯಾಕರಣ ಮೇಲಿನ ಪ್ರಶ್ನೆಗಳು** | | | | |
| | **ಸಾಹಿತ್ಯದ ಮೇಲಿನ ಪ್ರಶ್ನೆಗಳು** | | | | |
| | **ಭಾಷಾಸಾಮರ್ಥ್ಯದ ಮೇಲಿನ ಪ್ರಶ್ನೆಗಳು** | | | | |
| | ಒಟ್ಟು ಅಂಕಗಳು | **100** | **100** | **100** | **100** |

## SDA & FDA ಪರೀಕ್ಷೆಯ ರೂಪುರೇಷೆ

**ಪ್ರಶ್ನೆ ಪತ್ರಿಕೆಯಲ್ಲಿನ ವಿಷಯ ಹಾಗೂ ಅಂಕಗಳು**

ವಸ್ತುನಿಷ್ಠ ಬಹುಆಯ್ಕೆ ಮಾದರಿಯ ಪ್ರಶ್ನೆಗಳು (ಒಎಂಆರ್ ಶೀಟ್ ನಲ್ಲಿ ಉತ್ತರಿಸಬೇಕಾದ ಪ್ರಶ್ನೆ) **ಸಮಯ:** 1 1/2 ಘಂಟೆಗಳು

| ಕ್ರ. ಸಂ | ವಿಷಯ | ಅಂಕಗಳು |
|---|---|---|
| 1 | ಸಾಮಾನ್ಯ ಕನ್ನಡ ಪತ್ರಿಕೆ – 1 | 100 |
| | ಒಟ್ಟು ಅಂಕಗಳು | **100** |

## ದ್ವಿತೀಯ ದರ್ಜೆ ಸಹಾಯಕ ಆಯ್ಕೆ ಪರೀಕ್ಷೆ ಸಾಮಾನ್ಯ ಕನ್ನಡ – SDA Question Pattern Analysis

| ಕ್ರ.ಸಂ | ವಿಷಯಾನುಕ್ರಮಣಿಕೆ | 2017 | 2018 | 2019 | 2021 |
|---|---|---|---|---|---|
| 1 | ಸಮನಾರ್ಥಕ ಅಥವಾ ಸಮಿಪದ ಅರ್ಥವುಳ್ಳರೂಪ ಗುರುತಿಸಿ. | 10 | 10 | 10 | 24 |
| 2 | ವಿರುದ್ಧಾರ್ಥಕ ಪದವನ್ನು ಬರೆಯಿರಿ. | 5 | 6 | 6 | 6 |
| 3 | ನುಡಿಗಟ್ಟಿನ ಅರ್ಥವಿವರಿಸುವ ರೂಪವನ್ನು ಆಯ್ಕೆಮಾಡಿ. | 5 | 4 | 4 | 4 |
| 4 | ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ. | 6 | 6 | 6 | 8 |
| 5 | ಗೆರೆಎಳೆದ ಪದ ತಪ್ಪಾಗಿದ್ದರೆ ಸರಿಯಾದ ಪದ ಗುರುತಿಸಿ. ತಪ್ಪಿಲ್ಲದಿದ್ದರೆ ಸುಧಾರಣೆ ಬೇಕಿಲ್ಲ ಎಂದು ಗರುತಿಸಿ. | 5 | 4 | 4 | 5 |
| 6 | ಖಾಲಿಬಿಟ್ಟ ಜಾಗವನ್ನು ಸರಿಯಾದ ಉತ್ತರದಿಂದ ತುಂಬಿರಿ.<br>ಸಾಹಿತ್ಯ + ವ್ಯಾಕರಣದ ಮೇಲಿನ ಪ್ರಶ್ನೆಗಳು | 35 | 36 | 37 | 15 |
| 7 | ಅಚ್ಚಕನ್ನಡ ಪದವನ್ನು ಆರಿಸಿ ಬರೆಯಿರಿ / ಗುರುತಿಸಿ. | 4 | 4 | 4 | 4 |
| 8 | ದೋಷಗುರುತಿಸಿ ಸರಿಯಾದ ಪದ ಆರಿಸಿ ಇಲ್ಲವೆ, ಸುಧಾರಣೆ ಬೇಕಿಲ್ಲ ಎಂದು ಗರುತಿಸಿ. | 4 | - | 5 | 5 |
| 9 | PQRS (ವಾಕ್ಯ) ಅರ್ಥಪೂರ್ಣವಾಗಿ ಜೋಡಿಸಿ ಬರೆಯಿರಿ. | 5 | 5 | 5 | 5 |
| 10 | ವ್ಯಾಕರಣ ಅಥವಾ ಕಾಗುಣಿತ ದೋಷವುಳ್ಳ ಪದ ಗುರುತಿಸಿ. | 5 | 5 | - | - |
| 11 | PQRS (ಪದ) ಸ್ಥಾನಪಲ್ಲಟವಾದ ಪದಗಳನ್ನು ಅರ್ಥಪೂರ್ಣವಾಗಿ ಜೋಡಿಸಿ. | 5 | 5 | 5 | 5 |
| 12 | ಇಂಗ್ಲೀಷ ರೂಪಕ್ಕೆ ಸೂಕ್ತವಾದ ಪದವನ್ನು ಆರಿಸಿ ಬರೆಯಿರಿ. | - | - | - | 5 |
| 13 | ಕೆಳಗಿನ ಗದ್ಯಭಾಗವನ್ನು ಓದಿ ಅರ್ಥ ಗ್ರಹಿಸಿ ಕೇಳಲಾದ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಗುರುತಿಸಿ. | 5 | 5 | 4 | 4 |
| 14 | ತತ್ಸಮ ತದ್ಭವ ಪದಗಳನ್ನು ಬರೆಯಿರಿ. | - | - | - | 1 |
| 15 | ಗಾದೆಯ ಅರ್ಥವನ್ನು ಗ್ರಹಿಸಿ ಸೂಕ್ತ ಉತ್ತರ ಗುರ್ತಿಸಿ. | 5 | 3 | 4 | - |
| 16 | ಒಗಟುಗಳು | 1 | 3 | 2 | 3 |
| 17 | ಮುಂದೆ ಕೊಡಲಾದ ಪದಗಳಲ್ಲಿ ಸರಿಯಾದುದನ್ನು ಗುರ್ತಿಸಿ. (ಶುದ್ಧಪದ) | - | 4 | 4 | 6 |

## Group C/VAO/CTO ಪರೀಕ್ಷೆಯ ರೂಪುರೇಷೆ

**ಪ್ರಶ್ನೆ ಪತ್ರಿಕೆಯಲ್ಲಿನ ವಿಷಯ ಹಾಗೂ ಅಂಕಗಳು (ಸಂವಹನ ಪತ್ರಿಕೆ)**

ವಸ್ತುನಿಷ್ಠ ಬಹುಆಯ್ಕೆ ಮಾದರಿಯ ಪ್ರಶ್ನೆಗಳು (ಒಎಂಆರ್ ಶೀಟ್ ನಲ್ಲಿ ಉತ್ತರಿಸಬೇಕಾದ ಪ್ರಶ್ನೆ) **ಸಮಯ:** 2 ಘಂಟೆಗಳು

| ಕ್ರ. ಸಂ | ವಿಷಯ | ಅಂಕಗಳು |
|---|---|---|
| 1 | ಸಾಮಾನ್ಯ ಕನ್ನಡ | 35 |
| 2 | ಸಾಮಾನ್ಯ ಆಂಗ್ಲ ಭಾಷೆ (ಇಂಗ್ಲಿಷ್) | 35 |
| 3 | ಗಣಕಯಂತ್ರದ ಸಾಕ್ಷರತೆ | 30 |
| | **ಒಟ್ಟು ಅಂಕಗಳು** | **100** |

| ಕ್ರ.ಸಂ | ವಿಷಯಾನುಕ್ರಮಣಿಕೆ | 2023 | 2023 | 2023 | 2023 | 2024 |
|---|---|---|---|---|---|---|
| 1 | ಸಮನಾರ್ಥಕ ಅಥವಾ ಸಮಿಪದ ಅರ್ಥವುಳ್ಳರೂಪ ಗುರುತಿಸಿ. | 13 | 3 | 8 | 12 | 7 |
| 2 | ವಿರುದ್ಧಾರ್ಥಕ ಪದವನ್ನು ಬರೆಯಿರಿ. | 1 | - | 1 | 1 | 1 |
| 3 | ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ. | - | 1 | 1 | - | - |
| 4 | ಗೆರೆ ಎಳೆದ ಪದ ತಪ್ಪಾಗಿದ್ದರೆ ಸರಿಯಾದ ಪದ ಗುರುತಿಸಿ. ತಪ್ಪಿಲ್ಲದಿದ್ದರೆ ಸುಧಾರಣೆ ಬೇಕಿಲ್ಲ ಎಂದು ಗರುತಿಸಿ. | 3 | - | 3 | 3 | 1 |
| 5 | PQRS (ವಾಕ್ಯ) ಅರ್ಥಪೂರ್ಣವಾಗಿ ಜೋಡಿಸಿ ಬರೆಯಿರಿ. | 1 | 1 | 1 | 1 | - |
| 6 | PQRS (ಪದ) ಸ್ಥಾನಪಲ್ಲಟವಾದ ಪದಗಳನ್ನು ಅರ್ಥಪೂರ್ಣವಾಗಿ ಜೋಡಿಸಿ. | 1 | - | 1 | 1 | 1 |
| 7 | ಇಂಗ್ಲೀಷ ರೂಪಕ್ಕೆ ಸೂಕ್ತವಾದ ಪದವನ್ನು ಆರಿಸಿ ಬರೆಯಿರಿ. | 2 | 1 | 2 | 2 | 2 |
| 8 | ವಾಕ್ಯಾರ್ಥ ಪದ ಪ್ರಯೋಗ | - | 1 | - | - | - |
| 9 | ಗಾದೆಯ ಅರ್ಥವನ್ನು ಗ್ರಹಿಸಿ ಸೂಕ್ತ ಉತ್ತರ ಗುರ್ತಿಸಿ. | - | 1 | 1 | - | 1 |
| 10 | ಒಗಟು | - | 3 | 1 | - | 1 |
| 11 | ಸಾಲು / ಉಕ್ತಿಯ ಮೇಲಿನ ಪ್ರಶ್ನೆ (ಸಾಹಿತ್ಯ) | 1 | 1 | - | 1 | - |
| 12 | ಸಾಹಿತ್ಯದ ಮೇಲಿನ ನೇರ ಪ್ರಶ್ನೆಗಳು | 7 | 9 | 10 | 6 | 6 |
| 13 | ವ್ಯಾಕರಣದ ಮೇಲಿನ ನೇರ ಪ್ರಶ್ನೆಗಳು | 6 | 13 | 6 | 7 | 14 |
| 14 | ಹೀನಾರ್ಥ ಪದ ಪ್ರಯೋಗ | - | 1 | - | - | - |
| 15 | ಹೊಸಗನ್ನಡ ರೂಪ | - | - | - | 1 | 1 |

## ಪರೀಕ್ಷೆಯ ರೂಪುರೇಷೆ


### ಪರೀಕ್ಷೆ ಮತ್ತು ಆಯ್ಕೆಗೆ ಸಂಬಂಧಿಸಿದಂತೆ ಅತಿಮುಖ್ಯ ಅಂಶಗಳು

**ವಯೋಮಿತಿ:**

ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಯು

SDA/Group C (PUC) ಕನಿಷ್ಠ 18 ವರ್ಷ & FDA/Group C (Degree) ಕನಿಷ್ಠ 21 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು.

| ಶೈಕ್ಷಣಿಕ ವಿದ್ಯಾರ್ಹತೆ | ಗರಿಷ್ಠ ವಯೋಮಿತಿ | |
|---|---|---|
| ಪ್ರಥಮ ದರ್ಜೆ ಸಹಾಯಕರು – ಪದವಿ | ಸಾಮಾನ್ಯ ವರ್ಗ | 35 ವರ್ಷ |
| ದ್ವಿತೀಯ ದರ್ಜೆ ಸಹಾಯಕರು – 10 + 2 / ತತ್ಸಮಾನ | 2ಎ, 2ಬಿ, 3ಎ, 3ಬಿ | 38 ವರ್ಷ |
| | ಪ.ಜಾ/ ಪ.ಪಂ/ ಪ್ರವರ್ಗ–1/ ವಿಕಲಚೇತನ ಅಭ್ಯರ್ಥಿಗಳಿಗೆ | 40 ವರ್ಷ |




# QUALITY SPEAKS

Topexams ಸಾಮಾನ್ಯ ಕನ್ನಡ

ನಿಮ್ಮ ಪುಸ್ತಕವನ್ನು ಇಂದೇ ಕಾಯ್ದಿರಿಸಿ.

Offer Price 400/- MRP 460/- | Free Delivery All over India

Google Pay or Phone pay 8880015000 ಮಾಡಿ. ನಿಮ್ಮ ವಿಳಾಸವನ್ನು Whatsapp ಗೆ ಕಳುಹಿಸಿ.

Contact For Books 88800-15000



ರಾಜ್ಯದ ಎಲ್ಲಾ ಪ್ರಮುಖ ಪುಸ್ತಕ ಮಳಿಗೆಗಳಲ್ಲಿ ಮತ್ತು ಆನ್‌ಲೈನ್‌ನಲ್ಲಿ ದೊರೆಯುತ್ತದೆ.

ಇತರೆ ಮಳಿಗೆಗಳಲ್ಲಿ ಆಫರ್ ಬೇರೆ ಬೇರೆ ಇರುತ್ತದೆ.

amazon.in | Flipkart | meesho | 99027-37486 / 90355-32100

# ಅಕ್ಷರಮಾಲೆ/ವರ್ಣಮಾಲೆ

**ಶುದ್ಧಾಕ್ಷರಕ್ಕೆ ಅಕ್ಕರ (ಅ–ಕ್ಷರ) ಅಥವಾ ವರ್ಣವೆಂದು**

Free Tests

ಭಾಷೆಯು ಧ್ವನಿಯ ಮೂಲಕ ಪ್ರಾರಂಭವಾಗಿ ಬರಹ (ಲಿಪಿ) ದಿಂದ ವ್ಯಕ್ತವಾಗುತ್ತದೆ. ಹೀಗೆ ಅಕ್ಷರ ಅಥವಾ ಶಬ್ದಗಳು ಮಾತಿನಲ್ಲಿರುವ ಧ್ವನಿಯ ರೂಪವೇ ಆಗಿದೆ.

ಸಾಮಾನ್ಯವಾಗಿ ಮಾತಿನಲ್ಲಿರುವ ಧ್ವನಿಯ ರೂಪದ ಭಾಷೆ ನುಡಿದ ಕೂಡಲೇ ಅಳಿಸಿ ಹೋಗುತ್ತದೆ. ಆದರೆ ಬರಹ ರೂಪದಲ್ಲಿರುವ (ಲಿಪಿ) ಸಂಕೇತಗಳು ಅಳಿಯದೆ ಉಳಿಯುವಂತಹುಗಳು, ಆದ್ದರಿಂದಲೇ **'ಅಕ್ಷರ'** ಎಂದರೆ ನಾಶವಾಗದಿರುವುದು ಎಂದರ್ಥ. VAO-K 2024

- ಕೇಶಿರಾಜನು ಈ ಅಕ್ಷರಗಳನ್ನು **'ವರ್ಣ'** ಎಂದು ಶಬ್ದಮಣಿದರ್ಪಣದಲ್ಲಿ ತಿಳಿಸಿದ್ದಾನೆ.
- ಕೇಶಿರಾಜನು ವರ್ಣಮಾಲೆಯ ಅಕ್ಷರಗಳಿಗೆ ನೀಡಿರುವ ಹೆಸರು – **ಶುದ್ಧಗೆ/ ಪುದ್ಗುಲ**

**ನೆನಪಿಡಿ**

**ಅಕ್ಷರ ಎಂದರೇನು?**

ಭಾಷೆಯ ಅರ್ಥವತ್ತಾದ ಧ್ವನಿಯ ಬರಹರೂಪವುಳ್ಳ ಸಂಕೇತಗಳು ಮಾತ್ರ ಅಕ್ಷರವೆನಿಸುತ್ತವೆ. ಆದ್ದರಿಂದ, ಒಂದು ಭಾಷೆಯ ಅತಿ ಚಿಕ್ಕ ಅಂಶವೆಂದರೆ **'ಅಕ್ಷರ/ವರ್ಣ'**.

**ಅತಿಮುಖ್ಯವಾದ ಅಂಶಗಳು**

- **ಹಳೆಗನ್ನಡ ವರ್ಣಮಾಲೆ**ಯಲ್ಲಿ ಒಟ್ಟು **50** ಅಕ್ಷರಗಳಿದ್ದು, ಆದರೆ ಪ್ರಸ್ತುತ ಹೊಸಗನ್ನಡ ವರ್ಣಮಾಲೆಯಲ್ಲಿ 'ೞ' ಅಕ್ಷರವನ್ನು ಹೊರತುಪಡಿಸಿ ಒಟ್ಟು **49** ಅಕ್ಷರಗಳಿವೆ.
- ಕೇಶಿರಾಜನ ವ್ಯಾಕರಣಗ್ರಂಥವಾದ ಶಬ್ದಮಣಿದರ್ಪಣದಲ್ಲಿ **47** ಅಕ್ಷರಗಳಿವೆ. (ಕೇಶಿರಾಜನು ತನ್ನ ವ್ಯಾಕರಣ ಗ್ರಂಥವಾದ **ಶಬ್ದಮಣಿದರ್ಪಣ**ದಲ್ಲಿ **47 ಶುದ್ಧಗೆ**ಗಳ ಎಂದು ತಿಳಿಸಿದ್ದಾನೆ.)
- **KPSC** ಪ್ರಕಾರ ಪ್ರಸ್ತುತ ಕನ್ನಡ ವರ್ಣಮಾಲೆಯಲ್ಲಿ ಇರುವ ವರ್ಣಗಳ ಸಂಖ್ಯೆ **49**.
- ಕನ್ನಡ ಕೈಪಿಡಿಕಾರರ ಪ್ರಕಾರ ಕನ್ನಡ ವರ್ಣಮಾಲೆಯಲ್ಲಿರುವ ವರ್ಣಗಳ ಸಂಖ್ಯೆ **32**.
- ಆಧುನಿಕ ಭಾಷಾ ವಿಜ್ಞಾನಿಗಳ ಪ್ರಕಾರ ಕನ್ನಡ ವರ್ಣಮಾಲೆಯಲ್ಲಿ ಇರಬೇಕಾದ ವರ್ಣಗಳ ಸಂಖ್ಯೆ **26**.

ಕನ್ನಡದಲ್ಲಿ ಇರುವ ಒಟ್ಟು 49 ಅಕ್ಷರಗಳನ್ನು ವರ್ಣಗಳೆಂದು ಹಾಗು ವರ್ಣಗಳ ಕ್ರಮಬದ್ಧವಾದ ಜೋಡಣೆಯನ್ನು **'ಅಕ್ಷರಮಾಲೆ/ವರ್ಣಮಾಲೆ'** ಎಂದು ಕರೆಯುತ್ತಾರೆ.

## ಕನ್ನಡ ಅಕ್ಷರಗಳಲ್ಲಿ 3 ವಿಧಗಳು

**1] ಮೂಲಾಕ್ಷರಗಳು** (ಅ ಇಂದ ಳ ವರೆಗೆ)

**2] ಗುಣಿತಾಕ್ಷರಗಳು** (ಕ ಕಾ ಕಿ ಕೀ....)

**3] ಸಂಯುಕ್ತಾಕ್ಷರಗಳು / ಒತ್ತಕ್ಷರಗಳು** (ಕ್ಕ, ಮ್ಮ, ವ್ಯ, ಸ್ರ..)

**I] ಮೂಲಾಕ್ಷರಗಳು:** ಕನ್ನಡ ವರ್ಣಮಾಲೆಯ ಮೂಲಾಕ್ಷರಗಳನ್ನು 3 ಭಾಗಗಳಾಗಿ ವಿಂಗಡಿಸಬಹುದು.

1) ಸ್ವರಗಳು: ಅ – ಔ (13)

2) ಯೋಗವಾಹಗಳು: ಅಂ, ಅಃ (2)

3) ವ್ಯಂಜನಗಳು: ಕ – ಳ (34)

**ಸ್ವರಗಳು (13):** ಬೇರೊಂದು ಅಕ್ಷರದ ಸಹಾಯವಿಲ್ಲದೆ ಸ್ವತಂತ್ರವಾಗಿ ಉಚ್ಚರಿಸುವ ಅಕ್ಷರವನ್ನು **ಸ್ವರಗಳು** ಎನ್ನುತ್ತಾರೆ. ಅವು: **ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ**

**ಯೋಗವಾಹಗಳು (2):** GPSTR 2017

**ಕನ್ನಡದಲ್ಲಿ ಯೋಗವಾಹಗಳು ಎರಡು**

1. ಂ – ಅನುಸ್ವಾರ (ಒಂದು ಅಕ್ಷರಗಾತ್ರದ ಒಂದು ಸೊನ್ನೆ)
2. ಃ – ವಿಸರ್ಗ (ಎರಡು ಸಣ್ಣ ಸೊನ್ನೆಗಳು ಒಂದರ ಕೆಳಗೆ ಒಂದರಂತೆ ಒಂದು ಅಕ್ಷರಗಾತ್ರದಲ್ಲಿ)

**ಯೋಗ** ಎಂದರೆ ಕೂಡು, **ವಾಹ** ಎಂದರೆ ಹೋಗುವ ಎಂದರ್ಥ. ಒಟ್ಟಾಗಿ ಯೋಗವಾಹ ಎಂದರೆ **ಕೂಡಿಹೋಗುವ** ಎಂದರ್ಥ. ಅಂದರೆ ಒಂದು ಅಕ್ಷರದೊಂದಿಗೆ ಸಂಬಂಧ ಹೊಂದಿದ ಮೇಲೆಯೇ ಉಚ್ಚಾರ ಮಾಡಲು ಬರುವ ಅಕ್ಷರ.

**ನೆನಪಿಡಿ**

- **ಅಕ್ಷರ** ಪದದ ಪ್ರಸ್ತಾಪ ಮೊದಲ ಬಾರಿಗೆ ಪ್ರಾಚೀನ ಗ್ರಂಥವಾದ **ಪತಂಜಲಿ**ಯ **ಮಹಾಭಾಷ್ಯ**ದಲ್ಲಿ ಕಂಡುಬರುತ್ತದೆ.
- **ಕ್ಷರ** ಎಂದರೆ **ಅಳಿದು ಹೋಗುವ, ಅ–ಕ್ಷರ** ಎಂದರೆ ಅಳಿಯದೆ ನಿಲ್ಲುವುದು ಎಂದರ್ಥ.

**ವ್ಯಂಜನಗಳು (34):** ಸ್ವರಗಳ ಸಹಾಯದಿಂದ ಉಚ್ಚರಿಸುವ ಅಕ್ಷರಗಳನ್ನು **ವ್ಯಂಜನಗಳು** ಎಂದು ಕರೆಯುತ್ತಾರೆ.

**ವ್ಯಂಜನಗಳನ್ನು ಮತ್ತೆ 2 ಭಾಗಗಳಾಗಿ ವಿಂಗಡಿಸಲಾಗಿದೆ.**

1) ವರ್ಗೀಯ ವ್ಯಂಜನಗಳು: ಕ – ಮ (25)

2) ಅವರ್ಗೀಯ ವ್ಯಂಜನಗಳು: ಯ – ಳ (9)

**1) ವರ್ಗೀಯ ವ್ಯಂಜನಗಳು:** ಅಕ್ಷರಗಳ ಉಚ್ಚಾರದ ಅನುಸಾರ ಗುಂಪುಗಳಾಗಿ/ವರ್ಗೀಕರಿಸಲು ಬರುವ ಅಕ್ಷರಗಳು.

**ಪ್ರತಿ ವರ್ಗದಲ್ಲಿ 5 ಅಕ್ಷರಗಳಿರುತ್ತವೆ**

| ವರ್ಗ | 1 ಅಲ್ಪ ಪ್ರಾಣ | 2 ಮಹಾ ಪ್ರಾಣ | 3 ಅಲ್ಪ ಪ್ರಾಣ | 4 ಮಹಾ ಪ್ರಾಣ | 5 |
|---|---|---|---|---|---|
| 'ಕ' ವರ್ಗ | ಕ್ | ಖ್ | ಗ್ | ಘ | ಙ್ |
| 'ಚ' ವರ್ಗ | ಚ್ | ಛ್ | ಜ್ | ಝ್ | ಞ್ |
| 'ಟ' ವರ್ಗ | ಟ್ | ಠ್ | ಡ್ | ಢ್ | ಣ್ |
| 'ತ' ವರ್ಗ | ತ್ | ಥ್ | ದ್ | ಧ್ | ನ್ |
| 'ಪ' ವರ್ಗ | ಪ್ | ಫ್ | ಬ್ | ಭ್ | ಮ್ |

**2) ಅವರ್ಗೀಯ ವ್ಯಂಜನಗಳು:** ಅಕ್ಷರಗಳ ಉಚ್ಚಾರದ ಅನುಸಾರ ವರ್ಗೀಕರಿಸಲು ಬಾರದ ಅಕ್ಷರಗಳು.

| | | | | | | | | |
|---|---|---|---|---|---|---|---|---|
| ಯ್ | ರ್ | ಲ್ | ವ್ | ಶ್ | ಷ್ | ಸ್ | ಹ್ | ಳ್ |

## 2] ಕನ್ನಡದ ಗುಣಿತಾಕ್ಷರಗಳು:

VAO-K 2024

ವ್ಯಂಜನಗಳಿಗೆ ಸ್ವರ ಸೇರಿ ಆಗುವ ಅಕ್ಷರವನ್ನು '**ಗುಣಿತಾಕ್ಷರ**' ಎನ್ನುವರು. ಉದಾ:

| | (ವ್ಯಂಜನ + ಸ್ವರ) | ಪೂರ್ಣ ಅಕ್ಷರ |
|---|---|---|
| ಹ್ರಸ್ವ ಸ್ವರ: | (ಕ್ + ಅ) | ಕ |
| ದೀರ್ಘಸ್ವರ: | (ಕ್ + ಆ) | ಕಾ |

ಕ ಕಾ ಕಿ ಕೀ ಕು ಕೂ ಕೃ ಕೆ ಕೇ ಕೈ ಕೊ ಕೋ ಕೌ ಕಂ ಕಃ

## 3] ಸಂಯುಕ್ತಾಕ್ಷರಗಳು / ಒತ್ತಕ್ಷರ ಅಥವಾ ದಡ್ಡಕ್ಕರ

ಎರಡು ವ್ಯಂಜನಗಳು ಮಧ್ಯದಲ್ಲಿ ಯಾವ ಕಾಲ ವಿಳಂಬವೂ ಇಲ್ಲದೇ ಸೇರುವುದನ್ನು **ಸಂಯುಕ್ತಾಕ್ಷರ** ಅಥವಾ **ಒತ್ತಕ್ಷರ** ಅಥವಾ **ದಡ್ಡಕ್ಕರ** ಎಂದು ಕರೆಯುವರು.

**ಕನ್ನಡದಲ್ಲಿ ಒಟ್ಟು (34) ಒತ್ತಕ್ಷರಗಳಿವೆ ಅವು:**

ಕ್ಕ ಖ್ಖ ಗ್ಗ ಘ್ಘ ಙ್ಙ

ಚ್ಚ ಛ್ಛ ಜ್ಜ ಝ್ಝ ಞ್ಞ

ಟ್ಟ ಠ್ಠ ಡ್ಡ ಢ್ಢ ಣ್ಣ

ತ್ತ ಥ್ಥ ದ್ದ ಧ್ಧ ನ್ನ

ಪ್ಪ ಫ್ಫ ಬ್ಬ ಭ್ಭ ಮ್ಮ

ಯ್ಯ ರ್ರ ಲ್ಲ ವ್ವ ಶ್ಶ ಷ್ಷ ಸ್ಸ ಹ್ಹ ಳ್ಳ

> **ನೆನಪಿಡಿ**
>
> **ವಿಸರ್ಗ:** ಕೇಶಿರಾಜನು ವಿಸರ್ಗದ ಬಗ್ಗೆ "ನಿಸರ್ಗಮಾಗಿ ವಿಸರ್ಗಮಿಲ್ಲ" ಎಂದು **ಶಬ್ದಮಣಿದರ್ಪಣ** ಗ್ರಂಥದಲ್ಲಿ ತಿಳಿಸಿದ್ದಾನೆ.

**ಸಂಯುಕ್ತಾಕ್ಷರಗಳಲ್ಲಿ 2 ವಿಧಗಳಿವೆ:**

1. ಸಜಾತೀಯ ಸಂಯುಕ್ತಾಕ್ಷರಗಳು
2. ವಿಜಾತೀಯ ಸಂಯುಕ್ತಾಕ್ಷರಗಳು.

> **ನೆನಪಿಡಿ**
>
> ಕನ್ನಡ **ಕಾಗುಣಿತ** ಹಾಗೂ **ಒತ್ತಕ್ಷರಗಳ** **ಲಿಪಿಯ** ಮೂಲ **'ಬ್ರಾಹ್ಮಿ'**ಲಿಪಿಯಾಗಿದೆ.
>
> ಮೊದಲ ಬಾರಿಗೆ ಬ್ರಾಹ್ಮಿಲಿಪಿಯನ್ನು ಓದಿದವರು – **ಜೇಮ್ಸ್ ಪ್ರಿನ್ಸೆಪ್**



### 1. ಸಜಾತೀಯ ಸಂಯುಕ್ತಾಕ್ಷರ

ಒಂದೆ ಜಾತಿಯ ಎರಡು ವ್ಯಂಜನಗಳು ಸೇರಿ ಆಗುವ ಅಕ್ಷರಗಳು.

ಉದಾ: ಕ್ + ಕ್ + ಅ = ಕ್ಕ

ಗ್ + ಗ್ + ಆ = ಗ್ಗಾ, ಣ್ + ಣ್ + ಇ = ಣ್ಣಿ

ಸಜಾತೀಯ ಸಂಯುಕ್ತಾಕ್ಷರ ಹೊಂದಿದ ಪದಗಳು

ಉದಾ: ಅಮ್ಮಾ, ಅವ್ವಾ, ಅಪ್ಪಾ, ಕನ್ನಡ, ಹಬ್ಬ, ಗಿಡ್ಡಿ, **ಅಕ್ಕ**

VAO-K 2024

### 2. ವಿಜಾತೀಯ ಸಂಯುಕ್ತಾಕ್ಷರ

ಬೇರೆ ಬೇರೆ ಜಾತಿಯ ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳು ಸೇರಿ ಆಗುವ ಅಕ್ಷರಗಳು.

ಉದಾ: ಸ್ + ವ್ + ಅ = ಸ್ವ

ಪ್ + ನ್ + ಆ = ಪ್ನಾ, ಗ್ + ನ್ + ಇ = ಗ್ನಿ

ವಿಜಾತೀಯ ಸಂಯುಕ್ತಾಕ್ಷರ ಹೊಂದಿದ ಪದಗಳು

ಉದಾ: ಶಕ್ತಿ, ಕಂಠ್ಯ, ವಸ್ತ್ರ, ಸ್ತ್ರೀ, ಶ್ರೀ, ಪದ್ಮ, ಪೂಜ್ಯ

### ಹಳಗನ್ನಡ ಅಕ್ಷರಗಳು (ಱಳ, ಕುಳ, ಕ್ಷಳ) & ಶಕಟರೇಫ

ಕನ್ನಡ ವರ್ಣಮಾಲೆಯಲ್ಲಿ (ವರ್ಣಮಾಲೆ) ಹಿಂದೆ ಮೂರು ರೀತಿಯ 'ಳ' ಕಾರಗಳಿದ್ದುವು. ಅವೇ **ಱಳ, ಕುಳ, ಕ್ಷಳ.**

(1) **ಱಳ ಪ್ರಯೋಗ:** ಈ 'ಳ' ಕಾರವೇ ಱಳ. **ಸೂೞ್** ಪದಕ್ಕೆ ಸರದಿ, ಪಾಳಿ;

**(ಹಳಗನ್ನಡದ ೞ (ಳ) 11ನೇ ಶತಮಾನ ಳ ಕಾರವಾಗಿದೆ)**

(2) **ಕುಳ ಪ್ರಯೋಗ:** ಕನ್ನಡ ಮೂಲದ ಅಚ್ಚಕನ್ನಡ 'ಳ' (ೞ) ಅಕ್ಷರವೇ ಕುಳ.

ಎಳ – ಚಿಕ್ಕ, ಸಣ್ಣ; ಕಳಿ – ಪಕ್ವವಾಗು, ಮಾಗು

(3) **ಕ್ಷಳ ಪ್ರಯೋಗ:** ಸಂಸ್ಕೃತದ 'ಲ' ಅಕ್ಷರಕ್ಕೆ ಬದಲಾಗಿ ಕನ್ನಡದಲ್ಲಿ 'ಳ' ಅಕ್ಷರವನ್ನು **'ಕ್ಷಳ' ಎನ್ನುವರು.**

- ಜಲ–ಜಳ, ಫಲ–ಫಳ, ಬಲ–ಬಳ, ಮಂಗಲ–ಮಂಗಳ, ಪಿಂಗಲ – ಪಿಂಗಳ, ಅನಲ - ಅನಳ ಇತ್ಯಾದಿ.

ಇದೇ ರೀತಿ 'ರ' ಕಾರದಲ್ಲಿಯೂ ಎರಡು ರೀತಿಯ 'ರ' ಕಾರಗಳು ಇದ್ದುವು. ಅವುಗಳನ್ನು **ರೇಫ,** ಮತ್ತು **ಶಕಟರೇಫ** ಎಂದು ಕರೆಯಲಾಗುತ್ತಿತ್ತು. ('ಱ್' ಅಕ್ಷರಕ್ಕೆ ಕಂಪಿತ ಎನ್ನುವರು)

- **ಱ > ರ (ಶಕಟರೇಫ – ರೇಫವಾಗಿರುವುದು)**

'ರ' ಅಕ್ಷರವೇ ರೇಫ ಮತ್ತು 'ಱ' ಅಕ್ಷರವೇ ಶಕಟರೇಫ.

ಈ ಅಕ್ಷರಗಳಿಂದ ಕೂಡಿದ ಪದಗಳಿಗೆ ಅರ್ಥ ವ್ಯತ್ಯಾಸವಿತ್ತು.

**ಉದಾ:** ಏರ್– ಹತ್ತು; ಏಱ್ – ಗಾಯ

ನೆರೆ – ಸಮೀಪ, ಅಕ್ಕಪಕ್ಕ ; ನೆಱೆ – ಪ್ರವಾಹ, ಮಹಾಪೂರ

ಮೊರೆ – ಪ್ರಾರ್ಥನೆ; ಮೊಱೆ – ಗೋಳಾಟ, ಗುಂಯ್ ಗುಡು. (ದುಂಬಿ ಮೊಱೆಯುತ್ತದೆ) ಅಱಿವಟ್ಟಿಗೆ – ಅರವಟ್ಟಿಗೆ

- **ೞ – ಳ (ರಳ > ಕುಳವಾಗಿರುವುದು)**

ಬಾೞ್ – ಬಾಳು.

**ಪ – ಹ ಬದಲಾವಣೆ:** ಹಳಗನ್ನಡದ ಕೆಲವು 'ಪ' ಕಾರ ನಡುಗನ್ನಡದಲ್ಲಿ 'ಹ' ಕಾರವಾಗಿ ಬಳಕೆಯಾಗುತ್ತಿದ್ದುದ್ದರಿಂದ

ಈ ರೀತಿಯ ಬಳಕೆಯನ್ನು ಕೇಶಿರಾಜ **"ದೇಶಿಯೊಳ್ ಇದು ಚೆಲ್ವು"** ಎಂದು ಶಬ್ದಮಣಿದರ್ಪಣದಲ್ಲಿ ಹೇಳಿದ್ದಾನೆ.

**ಉದಾ:** ಪಳಗನ್ನಡ – ಹಳಗನ್ನಡ, ಪಲ್ಲಿ – ಹಳ್ಳಿ

ಪಾಱು – ಹಾರು, ಪಾಲು – ಹಾಲು, ಪಕ್ಕಿ – ಹಕ್ಕಿ

**ರಳ(ಱ), ಕುಳ(ೞ), ಕ್ಷಳ** ಅಕ್ಷರಗಳನ್ನು ಸಂಪೂರ್ಣವಾಗಿ ತ್ಯಜಿಸಿ ಕಾವ್ಯವನ್ನು ರಚಿಸಿದವರು – **ಹರಿಹರ**

## ಕನ್ನಡ ಅಕ್ಷರಗಳ ಉಚ್ಚಾರಣಾ ಸ್ಥಾನಗಳು / ಕನ್ನಡ ವರ್ಣೋತ್ಪತ್ತಿಸ್ಥಾನಗಳು

| ವರ್ಣಸ್ಥಾನ | ಅರ್ಥ | ಅಕ್ಷರಗಳು | | |
|---|---|---|---|---|
| 1. ಕಂಠ್ಯವರ್ಣ–9 | ಗಂಟಲಿನಿಂದ ಹುಟ್ಟುವ ಅಕ್ಷರಗಳಿಗೆ ಕಂಠ್ಯವರ್ಣ | ಅ ಆ | ಕ ಖ ಗ ಘ ಙ | ಹ ವಿಸರ್ಗ( ಃ ) |
| 2. ತಾಲು/ತಾಲವ್ಯ –9 | ದವಡೆ (ತಾಲು) ಯಿಂದ ಹುಟ್ಟುವ ಅಕ್ಷರಗಳೆ ತಾಲವ್ಯಾಕ್ಷರಗಳು | ಇ ಈ | ಚ ಛ ಜ ಝ ಞ | ಯ ಶ |
| 3. ಮೂರ್ಧನ್ಯ –9 | ನಾಲಿಗೆಯ ಮೇಲ್ಭಾಗ ಮತ್ತು ಮೂಗಿನ ಕೆಳಭಾಗದ ಸಹಾಯದಿಂದ ಹುಟ್ಟುವ ಅಕ್ಷರಗಳು. | ಋ | ಟ ಠ ಡ ಢ ಣ | ರ ಷ ಳ ಕುಳ (ಱ), ಕ್ಷಳ (ೞ) |
| 4. ದಂತ್ಯವರ್ಣ–7 | ಹಲ್ಲುಗಳ ಸಹಾಯದಿಂದ ಹುಟ್ಟುವ ಅಕ್ಷರಗಳು | | ತ ಥ ದ ಧ ನ | ಸ ಲ |
| 5. ಓಷ್ಠವರ್ಣ–8 | ತುಟಿಯ ಸಹಾಯದಿಂದ ಹುಟ್ಟುವ ಅಕ್ಷರಗಳು | ಉ ಊ | ಪ ಫ ಬ ಭ ಮ | ಅಂ (ಅನುಸ್ವಾರ) |
| 6. ದಂತೌಷ್ಠ್ಯ–1 | ಹಲ್ಲು ಮತ್ತು ತುಟಿಯ ಸಹಾಯದಿಂದ ಹುಟ್ಟುವ ಅಕ್ಷರಗಳು VAO 2024 | | | ವ |
| 7. ಕಂಠತಾಲು–3 | ಕಂಠ ಮತ್ತು ದವಡೆಯ ಸಹಾಯದಿಂದ ಹುಟ್ಟುವ ಅಕ್ಷರಗಳು | ಎ ಏ ಐ | | |
| 8. ಕಂಠೋಷ್ಠ್ಯ–3 | ಕಂಠ ಮತ್ತು ತುಟಿಯ ಸಹಾಯದಿಂದ ಹುಟ್ಟುವ ಅಕ್ಷರಗಳು | ಒ ಓ ಔ | | |
| 9. ನಾಸಿಕವರ್ಣ–5 | ಮೂಗಿನ ಸಹಾಯದಿಂದ ಹುಟ್ಟುವ ಅಕ್ಷರಗಳು | | ಙ, ಞ ಣ ನ ಮ | |

**ನೆನಪಿಡಿ**

ಪ್ರಸ್ತುತ ಕನ್ನಡ ವರ್ಣಮಾಲೆಯಲ್ಲಿ ಸಂಸ್ಕೃತ ವರ್ಣಮಾಲೆಗೆ ಸೇರಿದ **ಋ, ಶ, ಷ, ವಿಸರ್ಗ** ಅಕ್ಷರಗಳಿವೆ.

ಕೂಕ್ಕೂಕೂ ಎಂದು ಕೋಳಿಕುಗಿದುವಾಗಳ್ – ಇಲ್ಲಿ ಕೂಕ್ಕೂಕೂ 3 ಮಾತ್ರಾ ಕಾಲ ಎಂದು ಚಾಕ್ಷುಷ ರೂಪದಲ್ಲಿ ತೋರಿಸಲು ಆಗುವುದಿಲ್ಲ. ಇದನ್ನು **ತ್ರಿಮಾತ್ರಾ** ಅಥವಾ **ಪ್ಲುತಸ್ವರ** ಎನ್ನುವರು.

# ಕನ್ನಡ ವರ್ಣಮಾಲೆಯ ವಿವರಣೆ

ಎರಡು ಮಾತ್ರೆಗಳ ಕಾಲಕ್ಕಿಂತ ಹೆಚ್ಚು ಕಾಲ ಉಚ್ಚರಿಸು ಅಕ್ಕರಕ್ಕೆ 'ಪ್ಲುತ' ಎಂದು ಹೆಸರು, ಇದನ್ನು (S) ಅವಗ್ರಹ ಚಿಹ್ನೆಯಿಂದ ಸೂಚಿಸಲಾಗುತ್ತದೆ.

## ಕನ್ನಡ ವರ್ಣಮಾಲೆ (49)

### ಸ್ವರಗಳು (13)
ಬೇರೊಂದು ಅಕ್ಷರದ ಸಹಾಯವಿಲ್ಲದೆ ಸ್ವತಂತ್ರವಾಗಿ ಉಚ್ಚರಿಸುವ ಅಕ್ಷರಗಳು

### ವ್ಯಂಜನಗಳು (34)
ಸ್ವರಗಳ ಸಹಾಯದಿಂದ ಉಚ್ಚರಿಸುವ ಅಕ್ಷರಗಳು

### ಯೋಗವಾಹಗಳು (2)
ಸ್ವತಂತ್ರವಲ್ಲದ, ಸ್ವರವೂ ಅಲ್ಲದ, ವ್ಯಂಜನವೂ ಅಲ್ಲದ ಸ್ವರಾಕ್ಷರಗಳ ಅಂತ್ಯದಲ್ಲಿನ ಹಾಗು ವ್ಯಂಜನಗಳ ಆರಂಭಾಕ್ಷರಗಳ ನಡುವಿನ 2 ಅಕ್ಷರಗಳನ್ನು **ಯೋಗವಾಹಗಳು** ಎಂದು ಕರೆಯುತ್ತಾರೆ.

#### (ಹ್ರಸ್ವ) ಹ್ರಸ್ವಸ್ವರ (6)
ಒಂದು ಮಾತ್ರಾಕಾಲದಲ್ಲಿ ಉಚ್ಚರಿಸುವ ಅಕ್ಷರಗಳು
**ಅ ಇ ಉ ಋ ಎ ಒ**
(ಹ್ರಸ್ವ ಎಂದರೆ ಚಿಕ್ಕದು)
**ಏಕಮಾತ್ರಾ (ಅ)**

#### ದೀರ್ಘಸ್ವರ (7)
ಎರಡು ಮಾತ್ರಾಕಾಲದಲ್ಲಿ ಉಚ್ಚರಿಸುವ ಅಕ್ಷರಗಳು
**ಆ ಈ ಊ ಏ ಐ ಓ ಔ**
(ದೀರ್ಘ ಎಂದರೆ ಉದ್ದದ್ದು)
**ದ್ವಿಮಾತ್ರಾ (ಆ)**

#### ಪ್ಲುತಸ್ವರ
ಮೂರು ಮಾತ್ರಾಕಾಲದಲ್ಲಿ ಉಚ್ಚರಿಸುವ ಅಕ್ಷರಗಳು
ಅಮ್ಮಾss, ಅಪ್ಪಾss, ಹಾ ರಾಮಾ, ಅಕ್ಕಾss
**ತ್ರಿಮಾತ್ರಾ**

#### ಅನುಸ್ವಾರ (1)
**ಅಂ**

#### ವಿಸರ್ಗ (1)
**ಅಃ**

#### ವರ್ಗೀಯ ವ್ಯಂಜನ (25)
ಅಕ್ಷರಗಳ ಉತ್ಪತ್ತಿಸ್ಥಾನದ ಆಧಾರದ ಮೇಲೆ ಸರಿಯಾಗಿ ವರ್ಗೀಕರಿಸಲು ಬರುವ ವ್ಯಂಜನಗಳನ್ನು ವರ್ಗೀಯ ವ್ಯಂಜನಗಳೆಂದು ಕರೆಯುತ್ತೇವೆ. ವರ್ಗೀಯ ವ್ಯಂಜನವನ್ನು ಮತ್ತೆ 3 ಭಾಗಗಳಾಗಿ ವಿಂಗಡಿಸಬಹುದು.

#### ಅವರ್ಗೀಯ ವ್ಯಂಜನ (9)
ಅಕ್ಷರಗಳ ಉತ್ಪತ್ತಿಸ್ಥಾನದ ಆಧಾರದ ಮೇಲೆ ಸರಿಯಾಗಿ ವರ್ಗೀಕರಿಸಲು ಬಾರದ ವ್ಯಂಜನಗಳನ್ನು ಅವರ್ಗೀಯ ವ್ಯಂಜನಗಳೆಂದು ಕರೆಯುತ್ತೇವೆ.
**ಯ್ ರ್ ಲ್ ವ್ ಶ್ ಷ್ ಸ್ ಹ್ ಳ್**

##### ಅಲ್ಪಪ್ರಾಣ (10)
ಕಡಿಮೆ ಉಸಿರಿನಿಂದ ಉಚ್ಚರಿಸುವ ಅಕ್ಷರಗಳು
**1 ಮತ್ತು 3ನೇ** ವರ್ಗದ ಅಕ್ಷರಗಳು
**ಕ್ ಮತ್ತು ಗ್**
**ಚ್ ಮತ್ತು ಜ್**
**ಟ್ ಮತ್ತು ಡ್**
**ತ್ ಮತ್ತು ದ್**
**ಪ ಮತ್ತು ಬ್**

##### ಮಹಾಪ್ರಾಣ (10)
ಹೆಚ್ಚು ಉಸಿರಿನಿಂದ ಉಚ್ಚರಿಸುವ ಅಕ್ಷರಗಳು
**2 ಮತ್ತು 4ನೇ** ವರ್ಗದ ಅಕ್ಷರಗಳು
**ಖ್ ಮತ್ತು ಘ್**
**ಛ್ ಮತ್ತು ಝ್**
**ಠ್ ಮತ್ತು ಢ್**
**ಥ್ ಮತ್ತು ಧ್**
**ಫ್ ಮತ್ತು ಭ್**

##### ಅನುನಾಸಿಕಗಳು (5)
ಮೂಗಿನ ಸಹಾಯದಿಂದ ಉಚ್ಚರಿಸುವ ಅಕ್ಷರವೇ ಅನುನಾಸಿಕಾಕ್ಷರ. ಇವು **5ನೇ** ವರ್ಗದ ಅಕ್ಷರಗಳಾಗಿವೆ.
**ಙ್ ಞ್ ಣ್ ನ್ ಮ್**



**ಕನ್ನಡ ವರ್ಣಮಾಲೆಯ ಬರಹ ರೂಪದ ಉಲ್ಲೇಖವುಳ್ಳ ಏಕೈಕ ಶಾಸನ: ಕೆರೆ ಸಂತೆ ಶಾಸನ ಚಿಕ್ಕಮಗಳೂರು ಜಿಲ್ಲೆ.**

**ಕೆರೆಸಂತೆ ಶಾಸನದಲ್ಲಿ ಒಟ್ಟು 49 ಅಕ್ಷರಗಳಿವೆ.**
ಕೃಪೆ: Epigraphical Society of India Journal Volume XXIX

## ಕನ್ನಡದ ಶುದ್ಧಾಕ್ಷರಗಳ ವಿಧಗಳು

| | | |
|---|---|---|
| ಸ್ವರ | 13 | ಅ ಇಂದ ಔ |
| ವರ್ಗೀಯ ವ್ಯಂಜನ | 25 | ಕಚಟತಪ – ವರ್ಗಗಳು |
| ಅವರ್ಗೀಯ ವ್ಯಂಜನ | 9 | ಯ–ಳ |
| ಯೋಗವಾಹ | 2 | ಅನುಸ್ವಾರ, ವಿಸರ್ಗ |

Group C 2021

- ಬೇರೆ ವರ್ಣಗಳ ಸಹಾಯದಿಂದ ಉಚ್ಚಾರಣೆಗೆ ಬರುವ ವರ್ಣಗಳನ್ನು **ಯೋಗವಾಹ** ಎಂದು ತಿಳಿಯಬೇಕು.

| | | |
|---|---|---|
| ಹಳಗನ್ನಡ ಅಕ್ಷರಗಳು | 2 | ಱ (ರ) ಮತ್ತು ೞ (ಳ) |
| ಹೊಸ ಸೇರ್ಪಡೆ | 2 | ಫ಼ ಮತ್ತು ಜ಼ |

- ಕೇಶಿರಾಜನ ಪ್ರಕಾರ **5 ದೇಶಿಯ ಅಕ್ಷರ**ಗಳೆಂದರೆ
  ಎ, ಒ, ಱ(ರಳ), ೞ (ಕುಳ), ಳ್(ಕ್ಷಳ)

- **ವಿಶಂಕೆ**: ಎ
  ಎಂದರೆ ಶಂಕೆ/**ಸಂದೇಹ/ಅನುಮಾನ** – 'ಎ' ಕಾರಾಂತ ಪದವು ಸಂದೇಹವನ್ನು ಸೂಚಿಸುತ್ತದೆ. ಆದ್ದರಿಂದ 'ಎ' ಕಾರವನ್ನು **'ವಿಶಂಕೆ'** ಎನ್ನುತ್ತೇವೆ.
  **ಉದಾ**: ಅವನೆ, ಇವನೆ, ಅವರೆ, ರಾಮನೆ, ನೀನೆ

- **ಅವಧಾರಣ**: ಏ
  ಎಂದರೆ ನಿರ್ಧಾರ ಎಂದರ್ಥ. 'ಏ' ಕಾರಾಂತದಿಂದ ಅಂತ್ಯವಾದ ಪದಗಳು ನಿರ್ಧಾರವನ್ನು ಸೂಚಿಸುತ್ತವೆ.
  **ಉದಾ**: ಅವನೇ, ಇವನೇ, ಅವರೇ, ರಾಮನೇ, ನೀನೇ

- **ನಿಪಾತ ಸ್ವರಗಳು: ಒ, ಓ**
  ದುಃಖ, ಕೋಪ ಮೊದಲಾದವುಗಳನ್ನು ವ್ಯಕ್ತಪಡಿಸುವ ಪದಗಳು ಒ, ಓ ಕಾರದಿಂದ ಅಂತ್ಯವಾಗುವುದೇ ನಿಪಾತ **ಸ್ವರ/ಸಂಜ್ಞೆ**. ನಿಪಾತಗಳನ್ನು ಅವ್ಯಯಗಳೆಂದೂ, ಪದಗಳೆಂದೂ ತಿಳಿಯಬೇಕು. **ಉದಾ**: ಅಯ್ಯೋ, ಓಹೋ

- **ಕನ್ನಡದಲ್ಲಿ ಸವರ್ಣಾಕ್ಷರಗಳು**
  **(ಅನುಲೋಮ ಸ್ವರಗಳು/ಸಮಾನ ಸವರ್ಣ ಸ್ವರಗಳು)**
  **ಅಆ, ಇಈ, ಉಊ, ಎಏ, ಒಓ** – ಈ ಅಕ್ಷರಗಳ ಜೋಡಿಗಳನ್ನು ಸವರ್ಣ/ ಸಮಾನ ಅಕ್ಷರಗಳೆಂದು ಕರೆಯುತ್ತೇವೆ.)

- **ಕನ್ನಡದ ವಿಲೋಮ ಸವರ್ಣ ಸ್ವರಗಳು**
  **ಆಅ, ಈಇ, ಊಉ, ಏಎ, ಓಒ**

- **ದ್ವಿತ್ವಕ್ಷರ** ಎಂದರೆ ಒಂದೇ ಜಾತಿಯ/ಸಜಾತಿಯ ಎರಡು ವ್ಯಂಜನಗಳು ಸೇರುವುದಕ್ಕೆ ದ್ವಿತ್ವಕರ ಎನ್ನುವರು. **ಉದಾ:** ಕನ್ನಡ, ಅಪ್ಪ, ಅಮ್ಮ, ಅಕ್ಕ, ತಮ್ಮ, ನಮ್ಮ

- **ಶಿಥಿಲ ದ್ವಿತ್ವ** ಎಂದರೆ ಒತ್ತಿ ಉಚ್ಚರಿಸದೆ ತೇಲಿಸಿ ಉಚ್ಚರಿಸುವ ಒತ್ತಕ್ಷರ, ಇಲ್ಲಿ ವಿಜಾತೀಯ ಒತ್ತಕ್ಷರವನ್ನು ತೇಲಿಸಿ ಉಚ್ಚರಿಸುತ್ತಾರೆ. (ಛಂದಸ್ಸಿನಲ್ಲಿ ಒತ್ತಕ್ಷರದ ಹಿಂದಿನ ಅಕ್ಷರವು ಗುರುವಾಗುತ್ತದೆ. ಆದರೆ ಆ ಒತ್ತಕ್ಷರವು ಶಿಥಿಲ ದ್ವಿತ್ವವಾಗಿದ್ದರೆ ಅದು ಗುರುವಾಗುವುದಿಲ್ಲ – ಲಘುವಾಗಿಯೇ ಉಳಿಯುತ್ತದೆ.)
  **ಉದಾ:** ಕುಳಿರ್ಗಾಳಿ, ಪೊಗರ್ವೆಟ್ಟೆ, ಅಮರ್ದು, ಕೆಸರ್ಗಳ್, ಬರ್ದುಕು, ಅಲರ್ದ, ಎರ್ದೆ, ಮುಗುಳ್ಗೆ, ಬೆಮರ್ಗಳ್

- **ಇವು ಶಿಥಿಲ ದ್ವಿತ್ವವಲ್ಲದ ಪದಗಳು**
  ಬಾಸುಳ್ಗಳ್, ಇಕ್ಕುಳ್ಗಳ್, ಪೊಕ್ಕುಳ್ಗಳ್

- **ಕನ್ನಡದಲ್ಲಿರುವ ಸಂಧ್ಯಕ್ಷರಗಳು** 2
  **ಐ, ಔ** (ಐ = ಎಯ್/ಅಯ್), (ಔ = ಅವ್)

- **ಸಂಸ್ಕೃತದಲ್ಲಿರುವ ಸಂಧ್ಯಕ್ಷರಗಳು** VAO-K 2024 **4**
  ಏ, ಐ, ಓ, ಔ

- **ಕಾರ ಮತ್ತು ವರ್ಣ**: (ಅಕಾರ – ಅವರ್ಣ)
- ಅಕಾರವೆಂದರೆ 'ಅ' ಎಂಬ ಅಕ್ಷರ. ಅವರ್ಣ ಎಂದರೆ ಸಜಾತೀಯ ಹ್ರಸ್ವ ದೀರ್ಘಾದಿ ಸಕಲ ಅಂಶಗಳಿಂದ ಕೂಡಿದ ಅಕ್ಷರಗಳೆಂದು ತಿಳಿಯಬೇಕು.

- **ನಾಮಿಗಳು ಎಂದರೇನು?**
  **ಅ, ಆ ವರ್ಣಗಳನ್ನು** ಬಿಟ್ಟು ಉಳಿದ ಸ್ವರಗಳನ್ನು **'ನಾಮಿ'** ಎಂದು ಕರೆಯುತ್ತೇವೆ. ಅವರ್ಣವು (ಅ ಆ) ಸಹಜವಾದದು, ಆದ್ದರಿಂದ ಅದು ನಾಮಿ ಅಲ್ಲ.
  **ನಾಮಿಗಳು: ಇ,ಈ ಉಊ ಎಏ, ಒಓ**
  **ಅವರ್ಣ: ಅಆ**

- **ಗುಣವೃದ್ಧಿಗಳು**
  **ಅವರ್ಣವನ್ನು** ಹೊರತುಪಡಿಸಿ ಉಳಿದ ನಾಮಿಗಳು ಅವರ್ಣ ಯೋಗದಿಂದ ಗುಣವೃದ್ಧಿಯನ್ನು ಪಡೆದುಕೊಳ್ಳುತ್ತವೆ ಆದ್ದರಿಂದ ಈ ಅಕ್ಷರಗಳನ್ನು **ಗುಣವೃದ್ಧಿಗಳು** ಅಥವಾ **ಗುಣವೃದ್ಧಿದಾಮರ್** ಎಂದು ಕರೆಯುತ್ತಾರೆ.

| | |
|---|---|
| ▪ ಅ + ಇ = ಏ | ▪ ಅ + ಉ = ಓ |
| ▪ ಅ + ಎ = ಐ | ▪ ಅ + ಒ = ಔ |

- **ಸ್ವರಾಂಗ & ವ್ಯಂಜನಾಂಗ ಎಂದರೇನು?**
  ಅನುಸ್ವಾರ ಮತ್ತು ವಿಸರ್ಗಗಳು ಸ್ವರಗಳಲ್ಲಿಯೇ ಸೇರಿದ್ದರೂ ಸ್ವರದೊಡನೆ ಉಚ್ಚಾರಗೊಳ್ಳುವ ಅನುಸ್ವಾರವನ್ನು **ಸ್ವರಾಂಗ**ವೆಂದೂ, ವ್ಯಂಜನದೊಡನೆ ಉಚ್ಚಾರಗೊಳ್ಳುವ ವಿಸರ್ಗವನ್ನು **ವ್ಯಂಜನಾಂಗ**ವೆಂದೂ ಕರೆಯುತ್ತಾರೆ. (ಅಂ–ಅನುಸ್ವಾರ, ಅಃ–ವಿಸರ್ಗ)

- **ಹಳಗನ್ನಡದಲ್ಲಿ 4 ಯೋಗವಾಹಗಳಿವೆ.**
  1. ಅನುಸ್ವಾರ (ಅಂ) 2. ವಿಸರ್ಗ (ಅಃ)
  3. ಉಪಾಧ್ಮಾನೀಯ ೱ : ಎಂದರೆ ಕಡಿಮೆ ಜೋರಿನಿಂದ ಊದುವುದರಿಂದ ಉಂಟಾಗುವ ಧ್ವನಿ ಎಂದರ್ಥ
  4. ಜಿಹ್ವಾಮೂಲೀಯ ('ೲ') : ಎಂದರೆ ನಾಲಿಗೆಯ ಬುಡದಿಂದ ಹೊರಡುವ ಧ್ವನಿ ಎಂದರ್ಥ

(ಉಪಾಧ್ಮಾನೀಯ ಮತ್ತು ಜಿಹ್ವಾಮೂಲೀಯ ಕೇವಲ ಸಂಸ್ಕೃತದಲ್ಲಿ ಮಾತ್ರ ಬಳಕೆಯಲ್ಲಿವೆ.)

- ಕೇಶಿರಾಜನ ಪ್ರಕಾರ **ಕನ್ನಡ ಶುದ್ಧಗೆ**ಯಲ್ಲಿ ಐದು ವಿಧಗಳು. ಅವುಗಳು ಕ್ರಮವಾಗಿ:
  1. ಸ್ವರಗಳು
  2. ವರ್ಗೀಯ ವ್ಯಂಜನಗಳು
  3. ಅವರ್ಗೀಯ ವ್ಯಂಜನಗಳು
  4. ಯೋಗವಾಹಗಳು
  5. ದೇಶಿಯ ಅಕ್ಷರಗಳು

- **ಅನುನಾಸಿಕಗಳು** (ಙ, ಞ, ಣ, ನ, ಮ – 5 ಅಕ್ಷರಗಳು) ಮೂಗಿನ ಸಹಾಯದಿಂದ ಉಚ್ಚರಿಸುವ ಅಕ್ಷರಗಳೇ **ಅನುನಾಸಿಕಗಳು.** SDA 2019, GPSTR 2017

- **ಕೇಶಿರಾಜ ಹೇಳಿರುವ 9 ಅಸಾಧಾರಣ ಲಕ್ಷಣಗಳು**

| | |
|---|---|
| 1. ಗಮಕ ಸಮಾಸ | 6. ಪ > ಮ, ಹ > ಪ |
| 2. ಶೃತಿಸಹ್ಯ ಸಂಧಿ | 7. ಅವ್ಯಯ ಲಿಂಗ |
| 3. ರಳ, ಕ್ಷಳ, ಕುಳ | 8. ಯತಿವಿಲಂಘನ |
| 4. ಸತಿಸಪ್ತಮೀ | 9. ಶಿಥಿಲದ್ವಿತ್ವ |
| 5. ಸಮಸಂಸ್ಕೃತೋಕ್ತಿ | |

- **ಊಷ್ಮ ವರ್ಣಗಳು:** ಊಷ್ಮ ಎಂದರೆ ಉಷ್ಣ, ಕಾವು ಎಂದರ್ಥ. ಬಿಸಿಗಾಳಿಯೊಂದಿಗೆ ಕಿರುನಾಲಿಗೆ ಮತ್ತು ನಾಲಿಗೆಯಿಂದ ಶಿಳ್ಳೆ/ಉಷ್ ಶಬ್ದದೊಂದಿಗೆ ಹೊರಬರುವ ಅಕ್ಷರಗಳು. **ಉದಾ:** ಶ, ಷ, ಸ

- **ಘೋಷ ವರ್ಣಗಳು** (ಮೃದು ವರ್ಣಗಳು)
  ಗಂಟಲಿನ ವರ್ಣನಾಳಗಳಿಗೆ ಸ್ಪರ್ಶಿಸಿ ಹೊರಬರುವ ಅಕ್ಷರಗಳನ್ನು ಘೋಷ ವರ್ಣಗಳು ಎನ್ನುತ್ತಾರೆ.
  **ಉದಾ:** ಗ, ಜ, ಡ, ದ, ಬ, ಘ, ಝ, ಢ, ಧ, ಭ, ಙ, ಞ, ಣ, ನ, ಮ, ಯ, ರ, ಲ, ವ, ಹ

- **ಅಘೋಷ ವರ್ಣಗಳು** (ಕರ್ಕಶ ವರ್ಣಗಳು)
  ಗಂಟಲಿನ ವರ್ಣನಾಳಗಳಿಗೆ ಸ್ಪರ್ಶಿಸದೆ ಹೊರಬರುವ ಅಕ್ಷರಗಳನ್ನು ಅಘೋಷ ವರ್ಣಗಳು ಎನ್ನುತ್ತಾರೆ.
  **ಉದಾ:** ಕ, ಚ, ಟ, ತ, ಪ, ಖ, ಛ, ಠ, ಥ, ಫ, ಶ, ಷ, ಸ, ಳ

- **ಈಷತ್ ವರ್ಣಗಳು:** ಘೋಷ & ಅಘೋಷ ಎರಡೂ ವರ್ಣಗಳ ಗುಣಲಕ್ಷಣಗಳನ್ನು ಹೊಂದಿರುವ ಅಕ್ಷರಗಳು
  **ಉದಾ:** ಚ, ಜ

- **ಅಂತಸ್ಥ ವರ್ಣಗಳು:** ವ್ಯಂಜನವೂ ಸ್ವರವೂ ಆಗಬಹುದಾದ ಲಕ್ಷಣಗಳನ್ನು ಹೊಂದಿರುವ ಅಕ್ಷರಗಳು.
  **ಉದಾ:** ಯ, ರ, ಲ, ವ, ಳ

- **ಹೊಸಗನ್ನಡ ಅಕ್ಷರಗಳ ಹಳಗನ್ನಡ ರೂಪ**
  ರ – ಳ–ನ ಗಳನ್ನು ಹಳಗನ್ನಡದಲ್ಲಿ ಱ (ರ), ೞ (ಳ) ೝ(ನ್) ಎಂದು ಕರೆಯುತ್ತಾರೆ.

- **ತಾಲವ್ಯೀಕರಣ:** 'ಕ' ವರ್ಣವು 'ಚ' ವರ್ಣವಾಗಿ ಬದಲಾಗುವುದಕ್ಕೆ **ತಾಲವ್ಯೀಕರಣ** ಎಂದು ಭಾಷಾ ವಿಜ್ಞಾನಿಗಳು ಕರೆಯುತ್ತಾರೆ. **ಉದಾ:**
  ಕೆಂಬೋತ– ಚೆಂಬೋತ (ಕೆಂಬೂತ)
  ಕೆಂಗುಲಾಬಿ – ಚೆಂಗುಲಾಬಿ, ಕೆಂದುಟಿ – ಚೆಂದುಟಿ

- **ಅಕ್ಷರ ಪದನಿಷ್ಪತ್ತಿ**
  **ಕ್ಷರ** ಎಂದರೆ ಕ್ಷಯವಾಗು, ನಾಶವಾಗು, ಕ್ಷಯಿಸು, ಮುಗಿಯು ಎಂದರ್ಥ. **ಅ+ಕ್ಷರ** ಎಂದಾಗ ನಾಶವಾಗದ, ಕ್ಷಯಿಸಲಾಗದ ಎಂಬ ಅರ್ಥವನ್ನು ಪಡೆದುಕೊಳ್ಳುತ್ತದೆ. ಆದ್ದರಿಂದ **'ಯದ್ ಅಕ್ಷರತಃ ತಸ್ಮಾತ್ ಅಕ್ಷರಂ'** ಎಂದು ಅಕ್ಷರದ ಉತ್ಪತ್ತಿಯನ್ನು ಕುರಿತು ಹೇಳಲಾಗಿದೆ.

- **ಪ** > **ಹ** ಬದಲಾವಣೆಯ ಕಾಲ – **ಹಳಗನ್ನಡ**
- ಮೂಲ **'ಚ'** ಕಾರವನ್ನು ಉಳಿಸಿಕೊಂಡು ಬಂದಿರುವ ಭಾಷೆಗಳು – **ಮಧ್ಯ ದ್ರಾವಿಡ ಭಾಷೆಗಳು**

## ಈ ಹಿಂದೆ ನಡೆದ ಪರೀಕ್ಷೆಗಳಲ್ಲಿ ಈ ವಿಷಯದ ಮೇಲೆ ಕೇಳಲಾದ ಪ್ರಶ್ನೆಗಳು

**1.ಆ, ಈ, ಊ, ಋೂ ಎಂಬುವು** FDA 1997

(1) ದೀರ್ಘಸ್ವರ (3) ಪ್ರಸ್ವಸ್ವರ

(2) ಸುಸ್ವರ (4) ಅಪಸ್ವರ

**2. ಫ. ಭ, ಘ, ಧ ಎಂಬುವು** FDA 1991

(1) ಅಲ್ಪಪ್ರಾಣ (2) ಮಹಾಪ್ರಾಣ

(3) ಪಂಚಪ್ರಾಣ (4) ಸಪ್ರಾಣ

**3.ಭಾಷೆಯ ಅತ್ಯಂತ ಚಿಕ್ಕ ಘಟಕವೆಂದರೆ _____** FDA 2015

(1) ಪದ (2) ವಾಕ್ಯ

(3) ನಾಮಪದ (4) ಧ್ವನಿ

**4.ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ __________** FDA 2017

(1) 8 (2) 10

(3) 12 (4) 14

**5.ನಮ್ಮ ವರ್ಣಮಾಲೆಯಲ್ಲಿ 'ಅಂ' ಎಂಬುದು ________ ಆಗಿದೆ.**

(1) ಅನುನಾಸಿಕ FDA 2017 **(2) ಅನುಸ್ವಾರ**

(3) ಸಂಧ್ಯಕ್ಷರ (4) ಅಲ್ಪ ವಿಸರ್ಗ

**6.ವಿಜಾತೀಯ ಸಂಯುಕ್ತಾಕ್ಷರ ಇರುವ ಪದ** FDA 2017

(1) ರೊಟ್ಟಿ (2) ಅನ್ನ

(3) ರಾಗಿಮುದ್ದ (4) ಪಲ್ಯ

**7.ಕೆಳಗಿನವುಗಳಲ್ಲಿ ಕಂಠ್ಯ ಧ್ವನಿಯಾಗಿರುವುದು** FDA 2018

(1) ಕ್, ಗ್ (2) ಟ್, ಡ್

(3) ತ್, ದ್ (4) ಪ್, ಬ್

**8. 'ಆನೆ' ಪದದಲ್ಲಿ ಇರುವ ಸ್ವರಗಳು_________** FDA 2018

(1) ಒಂದು (2) ಎರಡು

(3) ನಾಲ್ಕು (4) ಮೂರು

**9.ದಡ್ಡಕ್ಕರ ಎಂದರೆ ಅದು _______ ಆಗಿರುತ್ತದೆ.** FDA 2018

(1) ದಪ್ಪ ಅಕ್ಷರ (2) ಒತ್ತಕ್ಷರ

(3) ಮಹಾಪ್ರಾಣ (4) ದೀರ್ಘಾಕ್ಷರ

**10.ಕನ್ನಡದ ವರ್ಣಮಾಲೆಯಲ್ಲಿರುವ ಸಂಧ್ಯಕ್ಷರಗಳು ಯಾವುವು?** FDA 2018

(1) ಋ ೠ (2) ಐ ಔ

(3) ಅಂ ಅಃ (4) ಕ್ಷ ಳ

**11.ಸ್ವತಂತ್ರವಾಗಿ ಉಚ್ಚಾರವಾಗದ ಅಕ್ಷರಗಳನ್ನು ಹೀಗೆ ಕರೆಯುತ್ತಾರೆ.** FDA 2019

(1) ಯೋಗವಾಹ (2) ಪ್ಲುತ

(3) ಸ್ವರ (4) ವ್ಯಂಜನ

**12. 'ಜ್' ಈ ಅಕ್ಷರದ ಉತ್ಪತ್ತಿ ಸ್ಥಾನ ಇದಾಗಿದೆ.** FDA 2019

(1) ಕಂಠ್ಯ (2) ತಾಲವ್ಯ

(3) ಮೂರ್ಧನ್ಯ (4) ಅನುನಾಸಿಕ

**13.ಕನ್ನಡ ವರ್ಣಮಾಲೆಯ ವಿವರ ಇರುವ ಕನ್ನಡದ ಒಂದು ಶಾಸನ** FDA 2021

(1) ಹಲ್ಮಿಡಿ ಶಾಸನ (2) ಜೀವನವಲ್ಲಭನ ಶಾಸನ

(3) ಕೆರೆಸಂತೆ ಶಾಸನ (4) ತಳಂಗೆರೆ ಶಾಸನ

**14.ಗುರು ಪದದಲ್ಲಿರುವ ಸ್ವರಗಳು** SDA 2019

(1) ಒಂದು (2) ಎರಡು

(3) ನಾಲ್ಕು (4) ಐದು

**15.ಕನ್ನಡದ ವರ್ಣಮಾಲೆಯಲ್ಲಿನ ವರ್ಗೀಯ ವ್ಯಂಜನಗಳಲ್ಲಿನ ಪಂಚಮಾಕ್ಷರಗಳನ್ನು ಏನೆಂದು ಕರೆಯಲಾಗಿದೆ?** SDA 2018

(1) ಯೋಗವಾಹಗಳು (2) ಸಂಧ್ಯಕ್ಷರಗಳು

(3) ಅನುಸ್ವಾರಗಳು (4) ಅನುನಾಸಿಕಗಳು

**16.ಈ ಕೆಳಗಿನವುಗಳಲ್ಲಿ ಓಷ್ಠ್ಯ ಧ್ವನಿಯಾಗಿರುವುದು** SDA 2019

(1) ಕ್, ಗ್ (2) ಚ್, ಜ್

(3) ಟ್, ಡ್ (4) ಪ್, ಬ್

**17.ಅನುಸ್ವಾರ ಮತ್ತು ವಿಸರ್ಗಗಳಿಗೆ ಇವುಗಳ ಸಹಕಾರ ಬೇಕಾಗಿಲ್ಲ.** Group C 2018

(1) ಹ್ರಸ್ವಸ್ವರಗಳ ಸಹಕಾರ

(2) ವರ್ಗೀಯ ವ್ಯಂಜನಗಳ ಸಹಕಾರ

(3) ಅವರ್ಗೀಯ ವ್ಯಂಜನಗಳ ಸಹಕಾರ

(4) ಯಾವುದೇ ಸ್ವರಗಳ ಸಹಕಾರ

**18._______ ಎಂಬ ಎರಡನ್ನು ಬಿಟ್ಟು ಉಳಿದ ಹನ್ನೆರಡು ವರ್ಣಗಳನ್ನು ನಾಮಿಗಳೆಂದು ಕರೆಯುತ್ತಾರೆ.** Group C 2018

(1) ಅ ಆ (2) ಉ ಊ

(3) ಇ ಈ (4) ಋ ೠ

19. ಕೇಶಿರಾಜನ ಪ್ರಕಾರ ಅಚ್ಚಗನ್ನಡ ಶುದ್ಧಗೆಗಳ ಸಂಖ್ಯೆ
Group C 2022, HSTR 2009
(1) 42 (2) 45
(3) 47 (4) 49

20. ಸ್ವರಾಕ್ಷರಗಳ ಆಶ್ರಯವಿಲ್ಲದೆ ಉಚ್ಚರಿಸಲಾಗದ ವರ್ಣಗಳು
Group C 2016
(1) ಸ್ವರಾಶ್ರಯ ವರ್ಣಗಳು (2) ಉಚ್ಚಾರಣಾ ವರ್ಣಗಳು
(3) ಯೋಗವಾಹಗಳು (4) ಅನುನಾಸಿಕಗಳು

21. ವ್ಯಂಜನಕ್ಕೆ ಸ್ವರ ಸೇರಿದರೆ Group C 2016
(1) ವ್ಯಂಜನಾಕ್ಷರ (2) ಗುಣಿತಾಕ್ಷರ
(3) ವ್ಯಂಜನ ಸ್ವರಾಕ್ಷರ (4) ಯಾವುದೂ ಅಲ್ಲ

22. ವ್ಯಂಜನಕ್ಕೆ ವ್ಯಂಜನ ಸೇರಿದರೆ Group C 2016
(1) ವ್ಯಂಜನಾವ್ಯಂಜನ (2) ಸಂಯುಕ್ತಾಕ್ಷರ
(3) ಗುಣಿತಾಕ್ಷರ (4) ಸಜಾತೀಯ ವ್ಯಂಜನ

23. ಕನ್ನಡ ಲಿಪಿಯ ಮೂಲ : Group C 2017
(1) ಖರೋಷ್ಠಿ (2) ನಾಗರಿ
(3) ದೇವನಾಗರಿ (4) ಬ್ರಾಹ್ಮೀ

24. ಙ, ಞ, ಣ, ನ, ಮ ಈ ವರ್ಣಗಳು ಜನಿಸುವ ಸ್ಥಳ
Group C 2018
(1) ಕಂಠೋಷ್ಠ್ಯ (2) ಮೂರ್ಧನ್ಯ
(3) ದಂತೋಷ್ಠ್ಯ (4) ನಾಸಿಕ

25. 'ಹಾ ರಾಮಾs' ಎಂಬುದು __________ ಕ್ಕೆ ಉದಾಹರಣೆ.
Group C 2018
(1) ಹ್ರಸ್ವ (2) ದೀರ್ಘ
(3) ಪ್ಲುತ (4) ವ್ಯಂಜನ

26. ಕನ್ನಡದಲ್ಲಿ ಎಷ್ಟು ಯೋಗವಾಹಗಳಿವೆ? Group C 2021
(1) ಒಂದು (2) ಮೂರು
(3) 'ನಾಲ್ಕು (4) ಎರಡು

27. ಕನ್ನಡದ 'ಕ್' ವ್ಯಂಜನವು ಕೆಳಗಿನ ಯಾವ ಗುಂಪಿಗೆ ಸೇರುತ್ತದೆ? ಉಪನ್ಯಾಸಕರ ನೇಮಕಾತಿ 2010
(1) ಕಂಠ್ಯ ಘೋಷ ಸ್ಪರ್ಶ
(2) ಪರಿವೇಷ್ಠಿತ ಅಘೋಷ ಸ್ಪರ್ಶ
(3) ಕಂಠ್ಯ ಅಘೋಷ ಸ್ಪರ್ಶ
(4) ವರ್ತ ಅಘೋಷ ಸ್ಪರ್ಶ

28. ಚ, ಜ ಧ್ವನಿಗಳನ್ನು ಯಾವ ಗುಂಪಿಗೆ ಸೇರಿಸಲಾಗುತ್ತದೆ?
ಉಪನ್ಯಾಸಕರ ನೇಮಕಾತಿ 2010
(1) ಘರ್ಷ (2) ಅನುಘರ್ಷ
(3) ಪಾರ್ಶ್ವಕ (4) ಸ್ಪರ್ಶ

29. ಅನುನಾಸಿಕಗಳು ಎಷ್ಟು? ಉಪನ್ಯಾಸಕರ ನೇಮಕಾತಿ 2010
(1) ಐದು (2) ನಾಲ್ಕು
(3) ಆರು (4) ಎಂಟು

30. ಇವು ಮೂರ್ಧನ್ಯ ಧ್ವನಿಗಳು ಉಪನ್ಯಾಸಕರ ನೇಮಕಾತಿ 2010
(1) ಕ್, ಚ್ (2) ಹ್, ಪ್
(3) ಟ್, ಡ್ (4) ಸ್, ರ್

31. ಯೋಗವಾಹಗಳು ಎಷ್ಟು? ಉಪನ್ಯಾಸಕರ ನೇಮಕಾತಿ 2010
(1) ಹತ್ತು (2) ನಾಲ್ಕು
(3) ಆರು (4) ಎಂಟು

32. ವರ್ಣಮಾಲೆಯಲ್ಲಿ 'ಅಂ' ಅಕ್ಷರಕ್ಕೆ ಈ ಹೆಸರಿದೆ
(1) ಹ್ರಸ್ವಸ್ವರ (2) ದೀರ್ಘಸ್ವರ
(3) ಉಚ್ಚಸ್ವರ (4) ಅನುಸ್ವಾರ

33. ಙ, ನ, ಮ ಅಕ್ಷರಗಳಿಗೆ ಈ ಹೆಸರಿದೆ PDO 2009
(1) ಅಲ್ಪಪ್ರಾಣಗಳು (2) ಅನುನಾಸಿಕಗಳು
(3) ಮಹಾಪ್ರಾಣಗಳು (4) ಸಂಧ್ಯಾಕ್ಷರಗಳು

34. ಕನ್ನಡ ವರ್ಣಮಾಲೆಯಲ್ಲಿ ಎಷ್ಟು ವರ್ಗೀಯ ವ್ಯಂಜನಗಳಿವೆ.
PDO 2011
(1) 21 (2) 23
(3) 25 (4) 20

35. ಐ, ಔ ಗಳಿಗೆ ವ್ಯಾಕರಣದಲ್ಲಿ ಈ ಹೆಸರಿದೆ. PDO 2011
(1) ಅನುಸ್ವಾರಗಳು (2) ಅನುನಾಸಿಕಗಳು
(3) ಯೋಗವಾಹಗಳು (4) ಸಂಧ್ಯಾಕ್ಷರಗಳು

36. 'ಪಾಠಶಾಲೆ' ಪದದಲ್ಲಿನ 'ಠ' ಎಂಬುದು
(1) ಅಲ್ಪಪ್ರಾಣಾಕ್ಷರ (2) ದೀರ್ಘಾಕ್ಷರ
(3) ಮಹಾಪ್ರಾಣಾಕ್ಷರ (4) ಅಘೋಷಿತಾಕ್ಷರ

37. ಙ್, ಞ್, ಣ್, ನ್ ಮತ್ತು ಮ್ ಧ್ವನಿಗಳು
(1) ಅನುಸ್ವಾರ ಧ್ವನಿಗಳು (2) ಅನುನಾಸಿಕ ಧ್ವನಿಗಳು

(3) ಅಲ್ಪಪ್ರಾಣ ಧ್ವನಿಗಳು (4) ಅವರ್ಗೀಯ ಧ್ವನಿಗಳು

**38.** 'ವಸ್ತ್ರ' ಪದದಲ್ಲಿನ ಸ್ + ತ್ + ರ್ + ಅ = ಸ್ತ್ರ ಎಂಬುದು
(1) ವಿಜಾತಿಯ ಒತ್ತಕ್ಷರ (2) ಗಣಿತಾಕ್ಷರ
(3) ಸಜಾತಿಯ ಒತ್ತಕ್ಷರ (4) ಮೂಲಾಕ್ಷರ

**39.** ಇವುಗಳಲ್ಲಿ ಅಘೋಷದ ಧ್ವನಿಮಾಗಳು **KSET 2016**
(1) ಗ ಜ ಡ ದ ಬ (2) ಅ ಇ ಉ ಎ ಒ
(3) ಕ ಚ ಟ ತ ಪ (4) ಙ ಞ ಣ ನ ಮ

**40.** ಅ ಇ ಉ ಎ ಒ ಇವು
(1) ವ್ಯಂಜನಗಳು (2) ಸಂಧ್ಯಾಕ್ಷರಗಳು
(3) ಸ್ವರಗಳು (4) ಅರ್ಧ ಸ್ವರಗಳು

**41.** ಕ್, ಚ್, ಟ್, ತ್, ಪ್ ಇವು
(1) ಸ್ವರಗಳು (2) ವ್ಯಂಜನಗಳು
(3) ಸಂಧ್ಯಾಕ್ಷರಗಳು (4) ಅನುನಾಸಿಕಗಳು

**42.** ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅಕ್ಷರಗಳು
(1) ಐವತ್ತು (2) ನಾಲ್ವತ್ತೇಳು
(3) ಐವತ್ತೆರಡು (4) ನಾಲ್ವತ್ತೊಂಭತ್ತು

**43.** ಪ್ಲುತದಲ್ಲಿರುವ ಮಾತ್ರೆಗಳ ಸಂಖ್ಯೆ
(1) ಒಂದು (2) ಎರಡು
(3) ಮೂರು (4) ಇಲ್ಲ

**44.** ಸಂಸ್ಕೃತದ 'ಲ' ಕಾರವನ್ನು ಕನ್ನಡದಲ್ಲಿ 'ಳ' ಕಾರವಾಗಿ ಬಳಸಿದರೆ ಅದನ್ನು ಹೀಗೆನ್ನುವರು.
(1) ಕುಳ (2) ಕ್ಷಳ
(3) ರಳ (4) ರೇಫ

**45.** ವರ್ಣಮಾಲೆಯಲ್ಲಿನ ಚ ವರ್ಗದ ಅಕ್ಷರಗಳು ಹುಟ್ಟುವ ಸ್ಥಾನವನ್ನು ಆಧರಿಸಿ ಅಂತಹ ಅಕ್ಷರಗಳನ್ನು ಹೀಗೆನ್ನುವರು?
(1) ಕಂಠ್ಯಕ್ಷರ (2) ಮೂರ್ಧನ್ಯಾಕ್ಷರ
(3) ತಾಲವ್ಯ ಅಕ್ಷರ (4) ಓಷ್ಠ್ಯ ಅಕ್ಷರ

**46.** ಕೇಶಿರಾಜನ ಪ್ರಕಾರ ಕನ್ನಡದ ದೇಸಿ ವರ್ಣಗಳು **HSTR 2008**
(1) ಎ, ಒ, ಳ್, ಱ್, ಹ್ (2) ಎ, ಒ, ಳ್, ಱ್, ಸ್
(3) ಎ, ಒ, ಳ್, ೞ್, ಱ್ (4) ಎ, ಒ, ರ್, ೞ್, ಱ್

**47.** ಈ ಜೋಡಿವರ್ಣಗಳು ಸವರ್ಣಗಳಲ್ಲ **HSTR 2008**
(1) ಅ ಆ (2) ಇ ಈ
(3) ಉ ಊ (4) ಐ ಔ

**48.** ಟವರ್ಗದ ವರ್ಣಗಳ ಉಚ್ಚಾರಣಾಸ್ಥಾನ ಇದು **HSTR 2008**
(1) ಕಂಠ (2) ತಾಲು
(3) ಮೂರ್ಧ (4) ದಂತ

**49.** ಇದು ಸಂಧ್ಯಾಕ್ಷರವಾಗಿದೆ. **HSTR 2009, KTET 2003**
(1) ಐ (2) ಓ
(3) ಋ (4) ಅಂ

**50.** ಈ ಅಕ್ಷರಗಳನ್ನು ಕಂಠೌಷ್ಠ್ಯ ವರ್ಣಗಳು ಎನ್ನುವರು **HSTR 2015**
(1) ಎ ಏ ಐ (2) ಒ ಓ ಔ
(3) ಐ ಓ ಔ (4) ಏ ಐ ಔ

**51.** "ಅನುಸ್ವಾರ, ವಿಸರ್ಗ" ಇವು
(1) ಯೋಗವಾಹಗಳು (2) ಸಂಧ್ಯಾಕ್ಷರಗಳು
(3) ಸ್ವರಗಳು (4) ಗುಣಿತಾಕ್ಷರಗಳು

**52.** ಇವುಗಳಲ್ಲಿ ಸವರ್ಣವಲ್ಲದ ವರ್ಣಗಳಿವು **ಮೋರಾರ್ಜಿ 2011**
(1) ಅ – ಆ (2) ಉ – ಊ
(3) ಒ – ಓ (4) ಐ – ಔ

**53.** ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ವ್ಯಂಜನಗಳ ಒಂದನೆಯ ಮತ್ತು ಮೂರನೆಯ ಅಕ್ಷರಗಳು: **GPSTR 2017**
(1) ಅನುನಾಸಿಕಗಳು (2) ಮಾಹಾಪ್ರಾಣಗಳು
(3) ಅಲ್ಪಪ್ರಾಣಗಳು (4) ಯೋಗವಾಹಗಳು

**54.** ಕನ್ನಡ ವರ್ಣಮಾಲೆಯಲ್ಲಿನ ಯೋಗವಾಹಗಳ ಸಂಖ್ಯೆ **GPSTR 2019**
(1) 13 (2) 5
(3) 9 (4) 2

**55.** ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕಗಳ ಸಂಖ್ಯೆ **GPSTR 2017**
(1) ಐದು (2) ಒಂಭತ್ತು
(3) ಹದಿಮೂರು (4) ಇಪ್ಪತ್ತೈದು

**56.** 'ಅನುಸ್ವಾರ, ವಿಸರ್ಗ' ಇವು – **GPSTR 2017**
(1) ಯೋಗವಾಹಕಗಳು (2) ಸಂಧ್ಯಕ್ಷರಗಳು
(3) ಸ್ವರಗಳು (4) ಗುಣಿತಾಕ್ಷರಗಳು

**57.** ಕೆಳಗಿನವುಗಳಲ್ಲಿ ಸಜಾತೀಯ ಸಂಯುಕ್ತಾಕ್ಷರ ಪದ **GPSTR 2017**
(1) ಅಕ್ಷರ (2) ವಸ್ತ್ರ
(3) ಶಿಕ್ಷಕ (4) ಚಿಕ್ಕಪ್ಪ

**58.** 'ಕುಳಿರ್ಗಾಳಿ' ಎನ್ನುವುದು **Group C 2021**
(1) ಶಿಥಿಲ ದ್ವಿತ್ವ (2) ಒತ್ತಕ್ಷರ
(3) ಸಂಯುಕ್ತಾಕ್ಷರ (4) ಸಬಿಂದುಕಾಕ್ಷರ

ಶಿಥಿಲ ದ್ವಿತ್ವದ ಹೆಚ್ಚಿನ ಮಾಹಿತಿಗಾಗಿ ಪುಟ ಸಂಖ್ಯೆ – 91

59. ಸೂರ್ಯತ, ಸುಗ್ಗಿ, ವಸ್ತ್ರ, ಅಕ್ಕರ, ಶಸ್ತ್ರ, ಹಬ್ಬ ಇವುಗಳಲ್ಲಿ ಸಜಾತೀಯ ಸಂಯುಕ್ತಾಕ್ಷರಗಳನ್ನು ಬೇರ್ಪಡಿಸಿ ಕ್ರಮವಾಗಿ ಬರೆಯಿರಿ. **Group C 2021**

(1) ಶಸ್ತ್ರ, ಸುಗ್ಗಿ, ಸೂರ್ಯ (2) ವಸ್ತ್ರ, ಶೂರ್ಯಿ, ಶಸ್ತ್ರ
(3) ಸುಗ್ಗಿ, ಅಕ್ಕರ, ಹಬ್ಬ (4) ಅಕ್ಕರ, ಸುಗ್ಗಿ, ವಸ್ತ್ರ

60. ಕನ್ನಡ ವರ್ಣಮಾಲೆಯಲ್ಲಿ ಎಷ್ಟು ವರ್ಗೀಯ ವ್ಯಂಜನಗಳಿವೆ? **PDO 2017**

(1) 21 (2) 23
(3) 20 (4) 25

61. ಆಧುನಿಕ ಭಾಷಾ ವಿಜ್ಞಾನಿಗಳು ಪ್ರಕಾರ ಕನ್ನಡ ವರ್ಣಮಾಲೆಯಲ್ಲಿ ಇರಬೇಕಾದ ವರ್ಣಗಳ ಸಂಖ್ಯೆ ________

(1) 47 (2) 36 (3) 26 (4) 49

62. ಚ್, ಜ್, ಞ್ – ಇವುಗಳಲ್ಲಿ ಹೀಗೆನ್ನುತ್ತಾರೆ? **KSET 2014**

(1) ತಾಲವ್ಯ (2) ವತ್ಸ್ಯ
(3) ದಂತೋಷ್ಠ್ಯ (4) ಮೂರ್ಧನ್ಯ

63. ಇವು ಘೋಷ ಧ್ವನಿಗಳು **KSET 2014**

(1) ಗ, ಚ, ಬ (2) ಕ, ಖ, ಗ
(3) ಜ, ಞ, ಣ (4) ಗ, ಜ, ಡ

64. ಪ್ರತಿ ವರ್ಗದ ಎರಡು ಮತ್ತು ನಾಲ್ಕನೆಯ ಅಕ್ಷರಗಳು

(1) ಅನುನಾಸಿಕಗಳು (2) ಅಲ್ಪ ಪ್ರಾಣಗಳು
(3) ಮಹಾಪ್ರಾಣಗಳು (4) ಅನುಸ್ವರಗಳು

65. ಅರಮನೆ ಈ ಪದದಲ್ಲಿರುವ ಒಟ್ಟು ಸ್ವರಗಳ ಸಂಖ್ಯೆ.

(1) 1 (2) 2
(3) 3 (4) 4

66. ಸರಿಯಾದ ರೀತಿಯಲ್ಲಿ ಕಾಲ ವಿಳಂಬವಿಲ್ಲದೆ ಸೇರುವ ಅಕ್ಷರಗಳನ್ನು ಏನೆಂದು ಕರೆಯುತ್ತಾರೆ?

(1) ಗುಣಿತಾಕ್ಷರ (2) ಸಂಯುಕ್ತಾಕ್ಷರ
(3) ಸಂಧ್ಯಾಕ್ಷರ (4) ಸಮಾಸ

67. ಅಕ್ಷರಕ್ಕೆ 'ವರ್ಣ' ಎಂದು ಕರೆದವರು.

(1) ಕೇಶಿರಾಜ (2) 2 ನೇ ನಾಗವರ್ಮ
(3) ಪಾಣಿನಿ (4) ಭಟ್ಟಾಕಳಂಕದೇವ

68. ತ, ಥ, ದ, ಧ, ಲ, ಸ ಈ ಅಕ್ಷರಗಳ ವರ್ಣೋತ್ಪತ್ತಿಗಳ ಸ್ಥಾನವು

(1) ತಾಲವ್ಯ (2) ಕಂಠ್ಯ
(3) ದಂತ್ಯ (4) ಯಾವುದು ಅಲ್ಲ

69. ಅವಧಾರಣ ಅಕ್ಷರ ಗುರುತಿಸಿ.

(1) ಎ (2) ಒ (3) ಏ (4) ಔ

70. ಈ ಕೆಳಗಿನವುಗಳಲ್ಲಿ 'ವಿಶಂಕೆ'

(1) ಋ (2) ಓ (3) ಅಃ (4) ಞ್

71. ವ್ಯಾಕರಣದಲ್ಲಿ 'ಮಾತ್ರೆ' ಎಂದರೆ

(1) ಅಕ್ಷರಗಳನ್ನು ಉಚ್ಚರಿಸಲು ತೆಗೆದುಕೊಳ್ಳುವ ಕಾಲ
(2) ಕಡಿಮೆ ಉಸಿರಿನಿಂದ ಉಚ್ಚರಿಸುವ ಅಕ್ಷರಗಳು
(3) ಅಕ್ಷರಗಳ ಉತ್ಪತ್ತಿಸ್ಥಾನದ ದೃಷ್ಟಿಯಿಂದ ಒಂದು ಗುಂಪು
(4) ಹೆಚ್ಚು ಉಸಿರಿನಿಂದ ಉಚ್ಚರಿಸುವ ಅಕ್ಷರಗಳು

72. ರಳ, ಕುಳ, ಕ್ಷಳ ಗಳನ್ನು ಹೋಗಲಾಡಿಸಿದ ಕವಿ

(1) ಕೇಶಿರಾಜ (2) ಹರಿಹರ
(3) ರಾಘವಾಂಕ (4) ಭಟ್ಟಾಕಳಂಕದೇವ

73. ಈ ಕೆಳಗಿನವುಗಳಲ್ಲಿ ಓಷ್ಠ್ಯ ಧ್ವನಿಯಾಗಿರುವುದು ________

(1. ಪ, ಬ್ (2) ಫ ಜ
(3) ತ ದ (4) ಏ ಐ

74. ಕುಕ್ಕೂಕ್ಕೂ ಎಂದು ಕೋಳಿಕೂಗಿದುವಾಗಳ್ – ಇದು ಯಾವ ಸ್ವರ ________ **PDO 2024**

(1. ಹ್ರಸ್ವ (2) ದೀರ್ಘ
(3) ಪ್ಲುತ (4) ಅನುನಾಸಿಕ

**ಉತ್ತರಗಳು**

| | | | | |
|---|---|---|---|---|
| 1) 1 | 2) 2 | 3) 4 | 4) 2 | 5) 2 |
| 6) 4 | 7) 1 | 8) 2 | 9) 2 | 10) 2 |
| 11) 4 | 12) 2 | 13) 3 | 14) 2 | 15) 4 |
| 16) 4 | 17) 4 | 18) 1 | 19) 3 | 20) 3 |
| 21) 2 | 22) 2 | 23) 4 | 24) 4 | 25) 3 |
| 26) 4 | 27) 3 | 28) 4 | 29) 1 | 30) 3 |
| 31) 2 | 32) 4 | 33) 2 | 34) 3 | 35) 4 |
| 36) 3 | 37) 2 | 38) 1 | 39) 3 | 40) 3 |
| 41) 2 | 42) 4 | 43) 3 | 44) 2 | 45) 3 |
| 46) 3 | 47) 4 | 48) 3 | 49) 1 | 50) 2 |
| 51) 1 | 52) 4 | 53) 3 | 54) 4 | 55) 1 |
| 56) 1 | 57) 4 | 58) 1 | 59) 3 | 60) 4 |
| 61) 3 | 62) 1 | 63) 2 | 64) 3 | 65) 4 |
| 66) 3 | 67) 1 | 68) 3 | 69) 3 | 70) 2 |
| 71) 1 | 72) 2 | 73) 1 | 74) 3 | |

ಅತಿ ಶೀಘ್ರ ಮಾರುಕಟ್ಟೆಯಲ್ಲಿ ಲಭ್ಯ



ಅಧ್ಯಾಯ

# 1 ವಿಶೇಷ ಸಮನಾರ್ಥಕ ಪದಗಳು

SDA, FDA, Group C, KTET, GPSTR ಅಭ್ಯರ್ಥಿಗಳು ತಪ್ಪದೇ ಕಲಿಯಬೇಕು.

## ಪ್ರಪಂಚ & ನಿಸರ್ಗ ಪದಗಳು

- **ಅಬ್ಧಿಪ:** ಅಬ್ಧಿ = ಸಮುದ್ರ, ಕೊಳ; ಪ = ಒಡೆಯ, ಅಬ್ಧಿಪ = ಸಮುದ್ರದ ಒಡೆಯ = ವರುಣ
- **ಆಕಾಶ:** ಅಂತರಿಕ್ಷ, ಅಂಬರ, ಆಗಸ, ಗಗನ, ನಭ, ಬಾಂದಳ, ಬಾನು, ವಾರಿದಪಥ, ವ್ಯೋಮ, ಗಾಳಿವಟ್ಟೆ, ಬಾಂ, ಬಾನ್, ಮುಗಿಲು VAO 2024
- **ಗಾಳಿ:** ತಿಮಿರ, **ವಾಯು**, ಎಲರ್, ಕಂಪುವಳ, ಗಂಧವಹ, ತಂಗಾಳಿ, **ಪವನ**, ಪ್ರಭಂಜನ, ಮಂದಮಾರುತ, ವಾತ, ಮಂದಾನಿಲ, ಮಾರಿಶ್ವ, ಸಮೀರ, **ಎರಲ್, ಎಲರು, ಪವಮಾನ**
- **ಚಂದ್ರ:** ಪೆರೆ, ಶಶಿ, ಸುಧಾಕರ, ರಜನೀಶ, ರಜನೀಕರ, ತಂಗದಿರ, ಮೃಗಾಂಕ, ಶೀತಾಂಶು, ಇಂದು, ಉಡುಹ, ತಿಂಗಳು, ಹಿಮಾಂಶ, ಸೋಮ, ತಾರಾಪತಿ, ಅಂಶುಮಂತ, ವಾರಿಜರಿಪು, ಹೆರಿ, ವನಜಾರಿ, ಏಣಾಂಕ, ಚಂದಮ, ಅಮೃತಕರ, ಅಮೃತಾಂಶು
- **ನೀರದ:** ಮೋಡ / ಅಬ್ದ, ಅಂಬುದ, ಪಯೋದ, ವಾರಿದ, ಜಲದ, ಅಭ್ರ
- **ನೀರು:** ಅಂಬು (ಬಾಣ), ಉದಕ, ಜಲ, ತೋಯ, ಪಯಸ್ಸು(ಹಾಲು), ಪಯಸ್ಸು, ಸಲಿಲ, ವಾರಿ, ಅಪ್, ಪಯ, ಜೀವನ, ಭುವನ, ವನಂ
- **ಬೆಂಕಿ:** ಅನಲ, ಪಾವಕ, ವೈಶ್ವಾನರ, ಜಾತವೇದ, ಕಿಚ್ಚು, ಉರಿ, ಕೆಂಡ, ಅಗ್ಗಿ, ಅಗ್ನಿ, ಜ್ವಾಲೆ, ಚಿತಾ, ಚಿತೆ, ವಹ್ನಿ, ಕೃಶಾನು, ಇಂಗಣ, ಇಂಗಳ, ಕಿರ್ಚು GPSTR 2019
- **ಭೂಮಿ:** **ಮೇದಿನಿ, ಧರಣಿ**, ಉರ್ವಿ, ಇಳೆ, ಅವನಿ, ತಿರೆ, ಧರಿತ್ರಿ, ಧರೆ, ಧಾತ್ರಿ, ಧಾರಿ, ಮಹಿ, ಕ್ಷಿತಿ, ಕ್ಷೋಣಿ, ಪೃಥ್ವಿ, ಕ್ಷ್ಮಾ, ಮಣ್ಣು, ವಸುಧೆ, ವಸುಮತಿ, ವಸುಂಧರೆ, ಅವನಿ, ಮರ್ತ್ಯ, ಭೂಲೋಕ, ಅವನೀತಳ, ಭೂಮಂಡಲ, ಭುವನ, ಪೊಡವಿ, ಪೃಥಿವಿ, ಭೂತಳ, ಗಂಧವತಿ, ಬುವಿ
- **ಸಮುದ್ರ:** ಅಕೂಪಾರ, ಅರ್ಣವ, **ಅಂಬುಧಿ**, ಪಯೋಧಿ, ವಾರಾಶಿ, ವಾರುಧಿ, ವಾರಿಧಿ, ಪಯೋನಿಧಿ, ವನಧಿ, ನೀರಧಿ, ಜಡಧಿ, ಜಲಧಿ, ಅಬ್ಧಿ FDA 2019
- **ತಿಂಗಳೂರು:** ಚಂದ್ರಲೋಕ
- **ಸೂರ್ಯ:** ಅಂಶುಮಂತ, ಅಗ್ನಿ, ಅರುಣ, ಅರ್ಕ, ಅರ್ಯಮ, ಅಹಃಪತಿ, ಆದಿತ್ಯ, ಇನ, ಒಡೆಯ, ಕೆಂಗದಿರ, ಖದ್ಯೋತ, ತರಣಿ, ತರಣಿತ, ದಿನಕರ, ದಿನಪ, ದಿವಸ್ಪತಿ, ದ್ಯುಮಣಿ, ನೇಸರ್, ಪುಸ, ಪ್ರಕಾರ, ಪ್ರಭಾಕರ, ಬಿಸಿಗದಿರ, ಬಿಸುಗದಿರ, ಬೆಳಕು, ಭಾಸ್ಕರ, ಮಾರ್ತಂಡ, ಮಾರ್ತಾಂಡ, ಮಿಹಿರ, ರವಿ, ರಾಜೀವಸಖ, ರಾಜು, ವಿಕರ್ತನ ವಿವಾಕರ, ಸರ್ಯ, ಸ್ವಾಹಿ, ವನಜಮಿತ್ರ, ಪೂಷ, ದಿನಮಣಿ, ಗಭಸ್ತಿಮಾಲಿ, ಗಗನಮಣಿ, ಚಂಡಕರ, ಬೆಂಗದಿರ, ಸಪ್ತಾಶ್ವ, ಭಾನು GPSTR 2019

## ಗಿಡ, ಮರ & ಪಕೃತಿ ಪದಗಳು

- **ಕಮಲ:** ಅಂಭೋರುಹ, **ಅಂಬುಜ,** ಅಂಭೋಜ, ಪಯೋಜ, ತಾವರೆ, ಪದ್ಮ, ಪದ್ಮಿನಿ ಪದುಮ, ನೈದಿಲೆ, ವನಜ, ನಳಿ(ಲಿ)ನ, ವನರುಹ, ನೀರಜ, ಪಂಕಜ, ಕುಮುದ, ಸರಸಿಜ, ಜಡಜ, ಜಲಜ, ಜಲರುಹ, ತಾಮರೆ, ಬಿಸಿನಿ, ಅಬುಜ, ಅಬ್ಜ FDA 2019
- **ಕಾಡು:** ಅಡವಿ, ಅರಣ್ಯ, **ಹಳು**, ಕಾನನ, ಕಾಂತಾರ, ಬನ, ವಿಪಿನ, ವನ, ಗಹನ, ಪಳು, ಕಾನ್(ನು)
- **ಬತ್ತ:** ವ್ರೀಹಿ, ನೆಲ್ಲು, ಶಾಳಿ(ಲಿ), ಕಳವೆ, ಕಳಮ, ಭತ್ತ
- **ಆಮ್ರ:** ಮಾವು
- **ಹೂವು:** ಮಲರು, ಪೂವು, ಪುಷ್ಪ, ಲತಾಂತ
- **ಕಲ್ಲು:** ಅಶ್ಮ
- **ದಿನ:** ವಾಸರ, ಹಗಲು, ದಿವಸ,
- **ಬೆಳಗ್ಗೆ:** ಪ್ರಾತಃಕಾಲ, ಪ್ರಭಾತ
- **ಸಂಜೆ:** ಸಾಯಂಕಾಲ, ಬಯ್ಗು
- **ಅನೋಕಹ:** ಮರ, ಗಿಡ

## ದೇವರ ನಾಮಗಳು & ವಿಶೇಷ ವ್ಯಕ್ತಿಗಳು

- **ಅಗ್ನಿ:** ಬೆಂಕಿ, ಚಿತೆ, ವಹ್ನಿ, ಕೆಂಡ, ಜ್ವಾಲೆ, ಅನಲ, ಚಿತಾ, ಕೃಶಾನು, ಧೂಮಕೇತು, ಉರಿ
- **ಅಬ್ಧಿಪ:** ವರುಣ FDA 2017
- **ಅರ್ಜುನ:** ಪಾರ್ಥ, **ನರ,** ಸವ್ಯಸಾಚಿ
- **ಅಸುರ:** ದಾನವ, **ರಾಕ್ಷಸ, ದನುಜ**, ದೈತ್ಯ, ನಿಶಾಚರ, ರಜನೀಚರ, ರಕ್ಕಸ VAO 2024

- **ಅಬ್ಜೋದರ:** ವಿಷ್ಣು, **ಕೌಸ್ತುಭಧರ**, ವಾರಿಜಾಕ್ಷ, ವನಜನಾಭ, ಪನ್ನಗಶಯನ, ದನುಜಾರಿ, ಚಕ್ರಪಾಣಿ, ಚಕ್ರಧರ, ಗಹಾದರ, ಮಾಧವ, ಪದ್ಮನಾಭ, ಹರಿ GPSTR 2019
- **ಇಂದ್ರ:** ಸಂಕ್ರಂದನ, ಸಹಸ್ರಾಕ್ಷ, ಇಂದ್ರ, ಹರಿ, ವಾಸವ, ಮಹೇಂದ್ರ, ಶಕ್ರ, ಪುರುಹೂತ, ದೇವೇಂದ್ರಪತಿ, ಪೌರಂದರ, ವಜ್ರಿ, ಶತಮುಖ, ಜಂಭಾರಿ, ಪಾಕಶಾಸನ, **ವಜ್ರಧರ** FDA 2015
- **ಏಕದಂತ:** ಗಣೇಶ, ಮೂಷಿಕ, ಗಜವದನ, ಲಂಭೋಧರ, ಗಣಪತಿ, ವಿನಾಯಕ, ಗಣಪ, ಗಜಮುಖ
- **ಕರ್ಣ:** ದಿನಪಸುತ, ವಸುಷೇಣ, ಇನಜ, ರವಿಸುತ
- **ಕಾಕುತ್ಸ್ಥ:** ರಾಮ, ರಾಮಸ್ವಾಮಿ
- **ಕುಂಭಸಂಭವ:** ದ್ರೋಣ, ಭಾರದ್ವಾಜ
- **ಕೃಷ್ಣ:** ದಾನವರಿಪು, ದಾಮೋದರ, ಮುರಾರಿ, ಏರ, ಶೌರಿ, ವಾಸುದೇವ, ಗೋವರ್ಧನ, ಗೋಪಾಲ, ಗೋವಿಂದ, ಕಂಸಾರಿ, ಗೋವರ್ಧನದಾರಿ
- **ಕೃತಾಂತ:** ಯಮ, ಕಾಲ
- **ಕೌಶಿಕ:** ವಿಶ್ವಾಮಿತ್ರ
- **ದುರ್ಯೋಧನ:** ಅಹಿಕೇತನ, ಸರ್ಪ ಧ್ವಜ, ಫಣಿಕೇತನ, ಗಾಂಧಾರೀನಂದನ
- **ದ್ರೌಪದಿ:** ಪಾಂಚಾಗಿ, ಶಶಿವದನೆ, ಲತಾಂಗಿ, ಪಾಂಚಾಲ ದೇಶದ ಅರಸುಪುತ್ರಿ,
- **ನದೀನಂದನ:** ಭೀಷ್ಮ
- **ಪಾರ್ವತಿ:** ಗೌರಿ
- **ಪೃಥೆ:** ಕುಂತಿ
- **ಭಾನುಮತಿ ನಂದನ:** ಲಕ್ಷಣಕುಮಾರ
- **ಭಾರ್ಗವ:** ಪರಶುರಾಮ
- **ಬ್ರಹ್ಮ:** ವನಜಭವ, ವನಜಸಂಭವ, ಬೊಮ್ಮ, ಚತುರಾಸ್ಯ, ಧಾತ, ವಿರಂಚಿ, ಅಜ
- **ಮನ್ಮಥ:** ಝಷಕೇತನ, ಕಾಮ, ಪುಲ್ಲಶರ, ಅಸಮಾಸ್ತ್ರ, ಅಲರಂಬ, ಅನಂಗ, ಮನಸಿಜ, ಮದನ, ರತಿಕಾಂತ, ದರ್ಪಕ, ಮಾರ, ಅಂಗಜ, ಕಾಮದೇವ
- **ಲಕ್ಷ್ಮೀಧರ:** ಲಕ್ಷ್ಮಣ
- **ವರುಣ:** ಮಳೆ, ಆಸಾರ, ಇರಸಿಲು, ಪರ್ಜನ್ಯ, ವರುಷ, ವರ್ಷ, ವೃಷ್ಟಿ, ಅಬ್ಧಿಪ
- **ವಾಗ್ದೇವಿ:** ಸರಸ್ವತಿ, ವಾಣಿ, ಶಾರದೆ, ವೀಣಾಪಾಣಿ, ಗೀರ್ವಾಣಿ
- **ವಾಸುದೇವ:** ವಾಯುದೇವ
- **ಶಿವ:** ಅಜಾತ, ಹುಟ್ಟಿಲ್ಲದವ, ಸ್ವಯಂಭು, ಪಿನಾಕಪಾಣಿ, ಶಂಕರ, ವ್ಯೋಮಕೇಶ, ಶಶಿಮೌಳಿ, ತ್ರಿನಯನ, ಶಂಭು, ಶಂಕರ, ಚಂದ್ರಚೂಡ, ಪಶುಪತಿ, ಮಾರಹರ, ಪಿನಾಕಿ, ಈಶ್ವರ, ಧೂರ್ಜಟಿ, ನಂಜುಂಡ ಇಂದುಧರ, ಗಂಗಾಧರ, ಹರ, ರುದ್ರ, ಮೃಡ, ಮೃಗಧರ, ಮೃತ್ಯುಂಜಯ, ಫಾಲನೇತ್ರ, ತ್ರೀನೇತ್ರ, ಪರಮೇಶ್ವರ, ಮುಕ್ಕಣ್ಣಮ, ಲಲಾಟನೇತ್ರ, ಹಣೆಗಣ್ಣ, ಗಿರೀಶ, ನಟರಾಜ, ನಾಗಭೂಷಣ, ನಿಟಿಲಾಕ್ಷ, ನೀಲಕಂಠ, ಫಣಿಕುಂಡಲ, ಅಭವ, ಶೂಲಪಾಣಿ, ಶೂಲಧರ, ಗಿರಿಜೇಶ, ಗೌರಿಶ, ಹರ
- **ಸರಸ್ವತಿ:** ವಾಗ್ದೇವಿ, ಶಾರದೆ, ವಾಣಿ, ವೀಣಾಪಾಣಿ, ಬುಹ್ಮಾಣಿ, ಭಾರತಿ Group C 2016
- **ಸೀತೆ:** **ಭೂಸುತೆ**, ಜಾನಕಿ, ಭೂಮಿಜೆ, ಧರಣಿಸುತೆ, ಭೂಜಾತೆ, ಭೂಮಿಜಾತೆ, ಅವನಿಸುತೆ, ಪೃಥುವಿಯಾತ್ಮಜೆ, ಇಳಾಸುತೆ, ಒಳಕೊಂಡಪುಣ್ಯವತಿ, ನಳಿನಾನನೆ, ಮಾನಿನಿ
- **ಸೌಮಿತ್ರಿ:** ಲಕ್ಷ್ಮಣ
- **ಮಯತನೂಜೆ:** ಮಯಪುತ್ರಿಯಾದ ಮಂಡೋದರಿ
- **ಖಚರ ಕಾಂತೆಯರ್:** ರಾಕ್ಷಸ ಸ್ತ್ರೀಯರು
- **ದೇವವ್ರತ:** ಭೀಷ್ಮನ ಹೆಸರು

## ಜೀವಿಗಳಿಗೆ ಸಂಬಂಧಿಸಿದ ಪದಗಳು

- **ಆಕಳು:** ಗೋವು, ಹಸು, ಸುರಭಿ, ಕಾಮಧೇನು, ತುರು
- **ಆನೆ:** ಇಭ, ಗಜ, ಕರಿ, **ದ್ವಿರದ**, ಸಲಗ, ಹಸ್ತಿ, ಇಭ, ದಂತಿ, ದ್ವಿಪ, ಕುಂಜರ, ಕುಂಭಿ, ಮಾತಂಗ, ಸಾಮಜ, ಆನೇಕಪ,
- **ಕತ್ತೆ:** ಗರ್ದಭ, ಗಾರ್ದಭ FDA 2019
- **ಕೋಣ:** ಮಹಿಷ ಅಬಕಾರಿ ರಕ್ಷಕ 2013
- **ಚಿರತೆ:** ಕುರ್ಕ
- **ಜಿಂಕೆ:** ಎರಲೆ(ಳೆ), ಕುರಂಗ, ಹುಲ್ಲೆ, ಚಿಗರಿ, ಚಿಗರೆ, ಹರಿಣ
- **ನರಿ:** ಜಂಬುಕ, ಬಳ್ಳು
- **ನಾಯಿ:** ಶ್ವಾನ, ಕುರ್ಕುರ, ಕುಕ್ಕರ, ಸಾರಮೇಯ, ಗ್ರಾಮಸಿಂಹ, ಜಾಯಿಲ, ಕುನ್ನಿ, ಅಲ್ಪ, ಕ್ಷುದ್ರ, ಶುನಕ, ಶ್ವಾನ, ನಾಯಿಮರಿ
- **ಶಶ:** ಮೊಲ

- **ಸಿಂಹ:** ವನರಾಜ, ಪಂಚಾಸ್ಯ, ಕೇಸರಿ, ಸಿಂಗ, ಮೃಗೇಂದ್ರ, ಮೃಗರಾಜ, ಇಭವೈರಿ, ಮೃಗರಿಪು
- **ಹಾವು:** ಪನ್ನಗ, ಸರ್ಪ, ವಿಷಧರ, ಅಹಿ, ವ್ಯಾಲ, ನಾಗ, ಉರಗ, ಭುಜಂಗ, ಸರಿಸೃಪ, ಪನ್ನಂಗ, ಭುಜಂಗಮ, ಎಲರುಣಿ, ದಂದಶೂಕ, ಕುಂಭೀನಸ,
- **ಹುಲಿ:** ವ್ಯಾಘ್ರ, ಶಾರ್ದೂಲ, ಪುಂಡರೀಕ, ತರಕ್ಷು, ದ್ವೀಪಿ, ಚಮೂರ, ಬಗ್ಗ
- **ಕುದುರೆ:** ತುರಂಗ, ತುರಗ, ವಾಜಿ, ಹಯ, ಅಶ್ವ, ಹರಿ, ಸೈಂಧವ, ತುಷಾರ, ವಾರುವ, ಘೋಟ, ಗೋಳ, ತೇಜಿ
- **ದುಂಬಿ:** ಮಧುಕರ, ಸಾರಂಗ, ಅಲರುಣಿ, ಅಲಿ(ಳಿ), ಧನು, **ಪರಮೆ (ಪಱಮೆ)** FDA 2015 ತುಂಬಿ, ಬಂಡುಣಿ, ಗುಂಗೀಹುಳ, ದ್ವಿರೇಫ, **ಭ್ರಮರ** FDA 2017
- **ಗೂಗೆ:** ಘೂಕ
- **ಹುಂಜ:** ಚರಣಾಯುಧ, ತಾಮ್ರಚೂಡ
- **ಕಾಗೆ:** ವಾಯಸ, ಕಾಕ
- **ಶುಕ:** ಗಿಳಿ

## ಇತರೆ ಪದಗಳು

- **ಕಣ್ಣು:** **ನಯನ**, ಚಕ್ಷು, ಅಕ್ಷಿ, **ನೇತ್ರ**, ಅಂಬಕ, ದೃಕ್ಕು
- **ಕೈ:** ಕರ, ಹಸ್ತ VAO 2024
- **ನಾಲಗೆ:** ಜಿಹ್ವೆ, ರಸನ, ರಸಜ್ಞೆ
- **ಪಾದ:** ಚಳನ, **ಅಡಿ**, ಚರಣ VAO 2024
- **ಮೂಗು:** ಘೋಣ, ಘ್ರಾಣ, ನಾಸಿಕ, ಘ್ರಾಣೇಂದ್ರಿಯ
- **ಕಿವುಡ:** ಬಧಿರ
- **ಮುದುಕ:** ಜಬ್ಬ, ಜರಠ
- **ಮುದುಕಿ:** ವೃದ್ಧೆ, ಬಿರ್ದಿ
- **ಸುತ:** ತನುಜ ಕುವರ ಕುಮಾರ ಕಂದ ಮಗ ಅಣುಗ ಅರ್ಭಕ ಆತ್ಮಜ ತನಯ
- **ಸುತೆ:** ಮಗಳು, ಪುತ್ರಿ, ವತ್ಸೆ, ತನುಜೆ, ತನಯೆ
- **ಜನನ:** ಹುಟ್ಟು, ಉದಯಿಸು, ಜನ್ಮ ತಾಳು, ಭವ
- **ಮರಣ:** ಸಾವು, ಸಾಯು, ಮಡಿ, ಸ್ವರ್ಗವಾಸಿ, ವೈಕುಂಠವಾಸ ಕೊನೆಯುಸಿರೆಳೆ, ಇಹಲೋಕ ತ್ಯಜಿಸು, ನಿಧನ, ಕಣ್ಮುಚ್ಚು, ಶಿವನಪಾದ ಸೇರು, ಸ್ವರ್ಗಸ್ಥನಾದ, ದೇವಸ್ಥಾನ ಲಿಂಗೈಕ್ಯ ಶಿವೈಕ್ಯ, ಬ್ರಹ್ಮೈಕ್ಯ, ಇನ್ನಿಲ್ಲವಾಗು,
- **ಜಿಪುಣ:** ಕೃಪಣ, ಲೋಭಿ, ಜೀನ, ಜುಗ್ಗ
- **ತುಪ್ಪ:** ಆಜ್ಯ, ಘೃತ, ಅನ್ನಶುದ್ಧಿ
- **ದಡ್ಡ:** ಗಾಂಪ, ಹೆಡ್ಡ, ಬೆಪ್ಪ, ಗುಗ್ಗು, ಬೆಳ್ಳ, ಅವಿವೇಕಿ
- **ಮನೆ:** ಗೇಹ, ಗೃಹ, ಧಾಮ, ನಿಕೇತನ
- **ಸತ್ಯ:** ತಥ್ಯ, ದಿಟ, ನಿಜ
- **ಹಾಲು:** ಅಮೃತ, ಪೀಯೂಷ
- **ಗಂಡ:** ಪತಿ, ನಲ್ಲ, ಕಾದಲ, ಪ್ರಣಯಿ, ಪ್ರೇಮಿ
- **ಹೆಂಡತಿ:** **ಪತ್ನಿ**, ಗೃಹಿಣಿ, ಸ್ತ್ರೀ, ಅರ್ಧಾಂಗಿ, ಕಾಂತೆ, ಪ್ರಾಣ ಪ್ರಿಯೇ, ಹೃದಯೇಶ್ವರಿ, ಗೃಹಲಕ್ಷ್ಮಿ, ಮನೆಯೊಡತಿ, ಸತಿ, ನಲ್ಲೆ, ಭಾರ್ಯೆ, ಕುಲವಧು, ಕಾದಲೆ, ಜಾಯೆ, ಮಡದಿ, ಪ್ರಣಯಿನಿ, ಪ್ರಮದೆ, ಪ್ರೇಯಸಿ
- **ಕುಲಾಲ ಚಕ್ರ:** ಮಡಕೆ ಮಾಡಲು ಕುಂಬಾರನು ಬಳಸುವ ಸಾಧನ
- **ರಹದಾರಿ:** ದೂರವನ್ನು ಅಳೆಯುವ ಮಾಪನ, ಮೂರು ಮೈಲಿಗೆ ಒಂದು ರಹದಾರಿ
- **ಮಸಿಕಾಣಿಕೆ:** ಕಂದಾಯ ವಸೂಲಿ ಸಂದರ್ಭದಲ್ಲಿ ಶಾನುಭೋರು ರೈತರಿಂದ ಪಡೆಯುತ್ತಿದ್ದ ಕಿರುಕಾಣಿಕೆ.
- **ಇರಸಾಲು:** ರೈತರಿಂದ ಸಂಗ್ರಹಿಸಿದ ಕಂದಾಯದ ಮೊತ್ತವನ್ನು ಖಜಾನೆಗೆ ಸಲ್ಲಿಸುವುದು.

## ಸಂಧಿಪದ & ಸಮಾಸಪದಗಳು

- **ರಾವಣಾರಿ** (ರಾವಣ + **ಅರಿ**) = ರಾಮ
- **ಅರಗಿಳಿ** (ಅರಸ + **ಗಿಳಿ**) = ಮುದ್ದುಗಿಳಿ, ಅರಸಂಚೆ
- **ಕಾವೇರಿ** (**ಕಾವ** + ಏರಿ) = ಕಾಪಾಡುವ ನೀರು
- **ಜಲಾಂಜಲಿ** (**ಜಲ** + ಅಂಜಲಿ) = ತರ್ಪಣ
- **ದಡಿಗವೇಣ** (**ದಡಿಗ** + ವೇಣ) = ಭಾರಿಹೆಣ
- **ದಿಗ್ದೇಶ** (**ದಿಕ್** + ದೇಶ) = ದಿಕ್ಪಾಲು
- **ಕಸವರಗಲಿ** (**ಕಸವರ** + ಕಲಿ) = ದಾನಶೂರ
- **ಬೆಳ್ಗೊಡೆ** (ಬೆಳ್ + ಕೊಡೆ) = ಬಿಳಿಯಕೊಡೆ
- **ಭವದ್ವಿ ಕ್ರಮ** (**ಭವರ್** + ವಿಕ್ರಮ) = ನಿನ್ನ ಶೌರ್ಯ
- **ಸೋವೇರಿ** (**ಸೋವ**+ಏರಿ) = ಪಾಪ ನಿವಾರಿಸುವ ತೀರ್ಥ
- **ವಿಯಚ್ಚರಾಧಿಪ** (**ವಿಯಚ್ಚರ** + ಅಧಿಪ) ರಾವಣ
- **ನಳಿನಾನನೆ** (ನಳಿನ+ಆನನೆ) ತಾವರೆಯಂತಹ ಮುಖವುಳ್ಳವಳು, ಸೀತೆ
- **ಭೂಸುರರು** (ಭೂಮಿಯ+ಸುರರು) (ಷಷ್ಠಿ ತತ್ಪುರುಷ ಸಮಾಸ) ಬ್ರಾಹ್ಮಣರು
- **ಮುಂಜೆರಗು** = ಸೆರಗು + ಮುಂದು (ಅಂಶಿ ಸಮಾಸ) = ಮುಂ + ಸೆರಗು = ಮುಂಜೆರಗು (ಆದೇಶ ಸಂಧಿ)

# ಸಮನಾರ್ಥಕ ಪದಗಳು

SDA, FDA, Group C, KTET, GPSTR ಅಭ್ಯರ್ಥಿಗಳು ತಪ್ಪದೇ ಕಲಿಯಬೇಕು.

- **ಅಂಕಿತ** = ಗುರುತು
- **ಅಂಕುಶ** = ಆನೆಯನ್ನು ಹದ್ದಿನಲ್ಲಿಡಲು ಉಪಯೋಗಿಸುವ ಒಂದು ಲೋಹದ ಸಾಧನ
- **ಅಂಗ** = ಭಾಗ
- **ಅಂಗಲಾಚು** = ಬೇಡು
- **ಅಂಗಳ** = ಅಂಗಣ, ಮನೆಯ ಮುಂದಿನ /ಹಿಂದಿನ ಬಯಲು ಭಾಗ
- **ಅಂಗುಲ** = ಒಂದು ಇಂಚು, ಬೆರಳು
- **ಅಂಗೈಸು** = ಕಾಳಜಿ ತೋರು
- **ಅಂಘ್ರಿ** = ಪಾದ (Group C 2016)
- **ಅಂಚು** = ಕೊನೆ, ತುದಿ, ದಡ, ತೀರ
- **ಅಂಜಲಿಬದ್ಧ** = ಕೈಮುಗಿದವ
- **ಅಂಜಿ** = ಹೆದರಿ (GPSTR 2017)
- **ಅಂಜು** = ಹೆದರು, ಭಯಪಡು
- **ಅಂತ** = ಅಂತ್ಯ, ಕೊನೆ
- **ಅಂತಂತ್ರಿಸಿ** = ನೀಳವಾಗಿ ನೋಡುವುದು
- **ಅಂತಃಕರಣ** = ದಯೆ
- **ಅಂತಃಪುರ** = ರಾಣಿವಾಸ
- **ಅಂತಕಾತ್ಮಜ** = ಅಂತಕ + ಆತ್ಮಜ = ಯಮನ ಮಗ (ಯುಧಿಷ್ಠಿರ)
- **ಅಂತರಂಗ** = ಒಳಗಿನ
- **ಅಂತರ್ಜಲ** = ಭೂಮಿಯ ಆಳದಲ್ಲಿರುವ ನೀರು
- **ಅಂತರ್ಧಾನ** = ಮಾಯವಾಗು, ಕಣ್ಮರೆಯಾಗು
- **ಅಂತುಟು** = ಅಷ್ಟು, ಹಾಗೆ (FDA 2021)
- **ಅಂತ್ಯಕ್ರಿಯೆ** = ಉತ್ತರ ಕ್ರಿಯೆ
- **ಅಂದದಿ** = ರೀತಿಯಲ್ಲಿ
- **ಅಂಧಕ** = ಕುರುಡ
- **ಅಂಧಕಾರ** = ಕತ್ತಲೆ, ತಿಮಿರ
- **ಅಂಬಕಳ** = ಅಂಬಲಿ, ರಾಗಿಗಂಜಿ
- **ಅಂಬುಜ** = ತಾವರೆ (GPSTR 2019) ನೀರು, ಜ = ಜನಿಸಿದ್ದು)
- **ಅಕಾಲಿಕ** = ಕಾಲವಲ್ಲದ
- **ಅಕ್ಕಚ್ಚು** = ಕಲಗಚ್ಚು, ಮುಸುರೆ ನೀರು (Group C 2021)
- **ಅಕ್ಷಮರು** = ಅಸಮರ್ಥರು
- **ಅಕ್ಷರಶಃ** = ಪ್ರತಿಯೊಂದು ವಿವರದಲ್ಲೂ
- **ಅಖಂಡ** = ಅವಿಚ್ಛಿನ್ನ, ಪೂರ್ಣ
- **ಅಖಿಲ** = ಸಕಲ, ಎಲ್ಲಾ
- **ಅಗಡು** = ಶೌರ್ಯ
- **ಅಗಣಿತ** = ಲೆಕ್ಕವಿಲ್ಲದಷ್ಟು, ಅಸಂಖ್ಯ
- **ಅಗಲ** = ವಿಶಾಲ
- **ಅಗಸಿ** = ಹೆಬ್ಬಾಗಿಲು
- **ಅಗ್ಗ** = ಕಡಿಮೆ ಬೆಲೆ
- **ಅಗ್ಗಳ** = ಶ್ರೇಷ್ಠ
- **ಅಗ್ನಿ** = ಬೆಂಕಿ
- **ಅಗ್ನಿಹೋತ್ರ** = ಯಜ್ಞಕುಂಡ
- **ಅಗ್ರಗಣ್ಯ** = ಮೊಟ್ಟಮೊದಲಿನ, ಸರ್ವಶ್ರೇಷ್ಠ
- **ಅಚಲ** = ಸ್ಥಿರ, ಅಚಲ
- **ಅಚ್ಚರಿ** = ಆಶ್ಚರ್ಯ, ಬೆರಗು
- **ಅಚ್ಚಳಿ** = ಅಂದಕೆಡು
- **ಅಚ್ಚಳಿಯದೆ** = ಅಂದಗೆಡದಂತೆ, ರೂಪುಗೆಡದಂತೆ
- **ಅಚ್ಚು** = ಆಧಾರ ಭಾಗ
- **ಅಜಾತ** = ಹುಟ್ಟಿಲ್ಲದವ, ಸ್ವಯಂಭು, ಶಿವ
- **ಅಜಿ** = ತಿಳಿ
- **ಅಟ್ಟ** = ಮಹಡಿ, ಎತ್ತರದ ಸ್ಥಳ, ಉಪ್ಪರಿಗೆ, ಮಾಳಿಗೆ
- **ಅಟ್ಟೋದು** = ಹೊರದೂಡುವುದು
- **ಅಡಗು** = (ನಾ) ಮಾಂಸ (ಕ್ರಿ) ಕಾಣದಂತಾಗು
- **ಅಡಚಣೆ** = ತೊಂದರೆ
- **ಅಡರು** = ಮೇಲಕ್ಕೆ ಹತ್ತು
- **ಅಡಸಿ** = ಮುತ್ತಿ, ಆವರಿಸಿ, ಬಯಸಿ
- **ಅಡಸು** = ಉಂಟಾಗು
- **ಅಡಹಾಯ್ದರೂ** = ಮೇಲೆ ಬಿದ್ದು ಬಂದರೂ
- **ಅಡಿ** = ಪಾದ
- **ಅಡ್ಡಣಿಗೆ** = ಊಟದ ತಟ್ಟೆಯನ್ನು ಇಡುವ ಪೀಠ
- **ಅಡ್ಡೆ** = ಹೆಗಲ ಮೇಲೆ ಹೊರುವುದಕ್ಕಾಗಿ ತಕ್ಕಡಿಯಂತೆ ಮಾಡಿರುವ ಬಿದಿರಿನ ದಬ್ಬೆಯ ಸಾಧನ
- **ಅಡ್ಮಿಟ್** = ದಾಖಲಾಗು
- **ಅಣಿ** = ಸಿದ್ಧತೆ
- **ಅಣಿಯಾಗು** – ಸಿದ್ಧವಾಗು
- **ಅಣ್ಮು** = ಪರಾಕ್ರಮ
- **ಅತಿಕುಟಿಲಮನ** = ಅತಿಯಾದ ಮೋಸದ ಮನಸ್ಸು
- **ಅತಿವೃಷ್ಟಿ** = ಅಗತ್ಯಕ್ಕಿಂತ ಹೆಚ್ಚು ಮಳೆ ಬೀಳುವುದು
- **ಅದಟ** = ಶೂರ
- **ಅದಟು** = ಪರಾಕ್ರಮ, ಶೌರ್ಯ
- **ಅದಿರು** = ಖನಿಜ
- **ಅದುಹು** = ಸಂಶಯ ಪಡು
- **ಅದ್ದಿ** = ಮುಳುಗಿಸು, ತೋಯಿಸು
- **ಅಧಃಪತನ** = ಸರ್ವನಾಶ, ಕೆಳಗೆ ಬೀಳುವುದು
- **ಅಧಿಪತ್ಯ** = ಯಜಮಾನಿಕೆ, ಒಡೆತನ
- **ಅಧೋಗತಿ** = ಸರ್ವನಾಶ, ದುರ್ಗತಿ, ಪತನ
- **ಅನನ್ಯ** = ಬೇರೆಯಲ್ಲದ, ಅದ್ವಿತೀಯ
- **ಅನರ್ಘ್ಯ** = ಶ್ರೇಷ್ಠ, ಉಜ್ವಲ, ಗನ, ಘನ, ಮಿಗಿಲು, ಮೈಮೆಗಾರ, ಸಮರ್ಥ
- **ಅನವಧಾನ** = ಗಮನ ಕೊಡದಿರುವುದು, ಉದಾಸೀನತೆ

**ಅನಾಕುಳಂ** = ನಿರಾಯಾಸವಾಗಿ


- **ಅನಾಥ** = ದಿಕ್ಕಿಲ್ಲದ, ತಬ್ಬಲಿ
- **ಅನಾದಿ** = ಪುರಾತನ
- **ಅನಾಹುತ** = ಆಕಸ್ಮಿಕ ಕೇಡು
- **ಅನಿತರೊಳಗೆ** = ಅಷ್ಟರಲ್ಲಿ

- **ಅನಿಮಿತ್ತ** = ಕಾರಣವಿಲ್ಲದೆ
- **ಅನಿರ್ವಚನೀಯ** = ಮಾತಲ್ಲಿ ವರ್ಣಿಸಲು ಸಾಧ್ಯವಾಗದ
- **ಅನಿವಾರ್ಯ** = ಅತ್ಯಗತ್ಯ
- **ಅನಿಸಿಕೆ** = ಅಭಿಪ್ರಾಯ, ಅಭಿಮತ
- **ಅನುಕಂಪ** = ಕರುಣೆ
- **ಅನುಕರಣೀಯ** = ಅನುಸರಿಸುವಂಥದ್ದು
- **ಅನುಗುಣ** = ಅನುಸಾರ, ಹೊಂದಿಕೊಂಡು
- **ಅನುಗ್ರಹ** = ಕೃಪೆ, ಆಶೀರ್ವಾದ, ದಯೆ
- **ಅನುಜ** = ಸೋದರ
- **ಅನುಜಾತ** = ಒಡಹುಟ್ಟಿದವನು
- **ಅನುಜೆ** = ಸಹೋದರಿ
- **ಅನುತಾಪ** = ಸಂತಾಪ
- **ಅನುದಿನ** = ದಿನನಿತ್ಯ
- **ಅನುಪಮ** = ಎಣೆಯಿಲ್ಲದ, ಹೋಲಿಕೆ ಮೀರಿದ, ಶ್ರೇಷ್ಠ
- **ಅನುಮತ** = ಸಮ್ಮತಿ
- **ಅನುಮರಣ** = ಅನುರೂಪವಾದ (ಅನುಗುಣವಾದ) ಮರಣ
- **ಅನುರಕ್ತಿ** = ಪ್ರೀತಿ
- **ಅನುರಣಿಸು** = ಅನುಸರಿಸಿ ಮುಂದುವರಿದ ಧ್ವನಿ
- **ಅನುರೂಪ** = ಯೋಗ್ಯವಾದವನು
- **ಅನುವರ** = ಯುದ್ಧ
- **ಅನುವಾಗು** = ಸಿದ್ಧನಾಗು
- **ಅನುವು** = ಅವಕಾಶ
- **ಅನುಸಂಧಾನ** = ಪರಿಶೀಲನೆ
- **ಅನೃತ** = ಸುಳ್ಳು, ಅಸತ್ಯ
- **ಅನ್ನ** = ಆಹಾರ
- **ಅನ್ನಕ್ಕ** = ತನಕ
- **ಅನ್ನದಾತ** = ರೈತ
- **ಅನ್ನರ್** = ಅಂತಹವರು
- **ಅನ್ಯೋನ್ನತಿ** = ಅಧ್ಯಾತ್ಮ ಸಾಧನೆಯಿಂದ ಉನ್ನತಿಗೇರುವುದು
- **ಅನ್ಯಮನಸ್ಕ** = ಮನಸ್ಸು ಬೇರೆಡೆಯಲ್ಲಿರುವುದು
- **ಅನ್ವಯ** = ವಂಶ
- **ಅನ್ವೇಷಣೆ** = ಹುಡುಕು, ಶೋಧಿಸು
- **ಅಪರಂಜಿ** = ಬಂಗಾರ
- **ಅಪರಗಿರಿ** = ಅಸ್ತಮಾನದ ಬೆಟ್ಟ, ಪಶ್ಚಿಮದ ಬೆಟ್ಟ
- **ಅಪರಾಧಿ** = ತಪ್ಪುಮಾಡಿದವನು
- **ಅಪರಿಪೂರ್ಣ** = ಪೂರ್ಣವಲ್ಲದ
- **ಅಪರಿಮಿತ** = ಪರಿಮಿತವಲ್ಲದ, ಮಿತಿಯಿಲ್ಲದ
- **ಅಪವ್ಯಯ** = ದುಂದುವೆಚ್ಚ
- **ಅಪೂರ್ವ** = ಅಪರೂಪದ; ಶ್ರೇಷ್ಠವಾದ.
- **ಅಪೇಕ್ಷಿಸುವೆನೇ** = ಬಯಸುವೆನೇ
- **ಅಪ್ಪುಕಯ್** = ಒಪ್ಪಿಕೊಳ್ಳು, ಒಲವು, ಪ್ರಿಪೇ, ಒಲವು, ಪ್ರೀತಿ, ಸ್ವೀಕರಿಸು
- **ಅಪ್ರತಿಭ** = ದಿಗ್ಭ್ರಮೆ
- **ಅಪ್ರತಿಮ** = ಹೋಲಿಕೆ ಇಲ್ಲದ, ಅಮೂರ್ತ
- **ಅಪ್ರತಿಮಲ್ಲ** = ಸರಿಸಾಟಿಯಿಲ್ಲದ ಜಟ್ಟಿ, ಧೀರ, ಭೀಮ
- **ಅಪ್ಸರೆ** = ದೇವತಾ ಸ್ತ್ರೀ
- **ಅಬುಧಿ** = ಸಮುದ್ರ
- **ಅಬ್ಧಿಪ**: (ಅಬ್ಧಿ = ಸಮುದ್ರ, ಕೊಳ; ಪ = ಒಡೆಯ) ಸಮುದ್ರದ ಒಡೆಯ = ವರುಣ (**ಅಪ್+ಧಿ**) Group C 2016
- **ಅಬ್ಬಬ್ಬ** = ಅಚ್ಚರಿ ಪದ
- **ಅಭಯ** = ರಕ್ಷಣೆ
- **ಅಭವ** = ಶಿವ
- **ಅಭಾದಿತ** = ತಡೆಯಿಲ್ಲದ
- **ಅಭಿಮತ** = ಅಭಿಪ್ರಾಯ
- **ಅಭಿಮಾನ** = ಹೆಮ್ಮೆ
- **ಅಭಿಲಾಷೆ** = ಆಸೆ, ಬಯಕೆ
- **ಅಭೀತೆಯಾಗು** = ಹೆದರದಿರು
- **ಅಭೀಷ್ಟ** = ಬಯಸಿದ್ದು
- **ಅಭ್ಯಾಗತರು** = ತಾವಾಗಿಯೇ ಬಂದವರು
- **ಅಭ್ರ** = ಆಕಾಶ, ಆಗಸ, ಗಗನ, ದಿವಂ, ನಭ, ಅಂಬರ GPSTR 2017
- **ಅಮರ** = ಶಾಶ್ವತ, ಅಳಿವಿಲ್ಲದ
- **ಅಮಾತ್ಯ** = ಮುಖ್ಯ ಸಚಿವ
- **ಅಮಿತ** = ಮಿತಿಯಿಲ್ಲದ
- **ಅಮೂಲ್ಯ** = ಬೆಲೆಕಟ್ಟಲಾಗದ
- **ಅಮೃತ** = ಹಾಲು, ಪವಿತ್ರವಾದುದು, ಸುಧೆ, ಹಾಲು
- **ಅಮೋಘ** = ಸಾರ್ಥಕವಾದ
- **ಅಮ್ಮೆ** = ಸಾಧ್ಯವಿಲ್ಲ
- **ಅಯ್ಯ** = ತಂದೆ
- **ಅರಗಿಳಿ** = (ಅರಸ+ಗಿಳಿ) ಮುದ್ದುಗಿಳಿ, ಅರಸಂಚೆ GPSTR 2019
- **ಅರಘಳಿಗೆ** = ಸ್ವಲ್ಪ ಹೊತ್ತು
- **ಅರಚು** = ಜೋರಾಗಿ ಕೂಗು
- **ಅರಣ್ಯರೋದನ** = ಯಾರ ಕಿವಿಗೂ ಬೀಳದ ಕೂಗು
- **ಅರಲಂಬು** = ಪುಷ್ಪಬಾಣ
- **ಅರಸು** = ಹುಡುಕು
- **ಅರಸು** = ಹುಡುಕು, ಶೋಧಿಸು, ರಾಜ, ಶ್ರೇಷ್ಠ
- **ಅರಳೆ** = ಹತ್ತಿ
- **ಅರಿ** = ತಿಳಿ, ಕತ್ತರಿಸು, ಶತ್ರು, ವೈರಿ ತಿಳಿದುಕೋ, ನಾಶ,
- **ಅರಿಕೆ** = ತಿಳಿವಳಿಕೆ
- **ಅರಿದು** = ಕತ್ತರಿಸಿ, ತಿಳಿದು
- **ಅರಿಬಲ** = ವೈರಿ ಸೈನ್ಯ
- **ಅರಿಯಟ್ಟು** = ಹೊಡೆದೋಡಿಸು
- **ಅರಿಯರು** = ತಿಳಿಯರು
- **ಅರಿಯಲ್** = ತಿಳಿದುಕೊಳ್ಳಲು
- **ಅರಿವು** = ತಿಳಿವಳಿಕೆ, ಜ್ಞಾನ, ಪ್ರಜ್ಞೆ
- **ಅರಿವೆ** = ಬಟ್ಟೆ, ವಸ್ತ್ರ, ಆಚ್ಛಾದನ, ದಿರ್ಸು, ವಸನ
- **ಅರಿಷಡ್ವರ್ಗಗಳು** = ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು

- **ಅರುಣ** = ಸೂರ್ಯ
- **ಅರುಣೋದಯ** = ಸೂರ್ಯೋದಯ
- **ಅರುಹು** = ತಿಳಿಸು, ಹೇಳು
- **ಅರೆ** = ಬಂಡೆ
- **ಅರೆದು** = ತೇದು, ಉಜ್ಜಿ
- **ಅರೆಯಟ್ಟಿ** = ಬೆನ್ನಟ್ಟಿ
- **ಅರೆವಾಸಿ** = ಅರ್ಧದಷ್ಟು FDA 2021
- **ಅರ್ಕ** = **ಸೂರ್ಯ**, ಎಕ್ಕೆಗಿಡ
- **ಅರ್ಘ್ಯ** = ಪೂಜ್ಯರಿಗೆ ಕೈ ತೊಳೆಯಲು ನೀಡುವ ನೀರು
- **ಅರ್ತಿ** = ಪ್ರೀತಿ
- **ಅರ್ಥ** = ಹಣ, ಸಂಪತ್ತು
- **ಅರ್ಥಿ** = ಬೇಡುವವನು
- **ಅರ್ವಿಸಿ** = ವ್ಯಾಪಿಸಿ, ಹರಡಿ
- **ಅಲಂಕಾರ** = ಸಿಂಗಾರ, ಸೊಗಸು
- **ಅಲಗು** = ಕತ್ತಿ GPSTR 2019
- **ಅಲರ್ದ** = ಅರಳಿದ
- **ಅಲರ್ವೋದ** = ಹೂ ಬಿಟ್ಟ
- **ಅಲೆ** = ತಿರುಗಾಡು, ಸುತ್ತಾಡು, ತರಂಗ, ತೆರೆ
- **ಅಲೆದು** = ತೂಗಿ, ಬಳುಕಿ
- **ಅಲೇ** = ಅಲ್ಲವೇ
- **ಅಲ್ಕರು** = ಪ್ರೀತಿ
- **ಅಲ್ತು** = ಅಲ್ಲ
- **ಅಲ್ತೆ** = ಅಲ್ಲವೆ
- **ಅಲ್ಪ** = ಕಡಿಮೆ
- **ಅವಂದಿರ್** = ಅವರು
- **ಅವಂಧ್ಯೆ** = ಬಂಜೆಯಲ್ಲದವಳು
- **ಅವಕ್ಕಾಗು** = ಮಾತಿಲ್ಲದಂತಾಗು, ಆಶ್ಚರ್ಯಪಡು
- **ಅವಜ್ಞೆ** = ಕಡೆಗಣಿಸುವಿಕೆ
- **ಅವಧಾರಿಪುದು** = ಗಮನಕೊಡುವುದು
- **ಅವನತಿ** = ಕೀಳುದೆಸೆ
- **ಅವನತಿ** = ಶ್ರೇಷ್ಠತಾ ಕುಸಿತ.
- **ಅವನಿ** = ಭೂಮಿ, **ಗಂಥವತಿ** ಅಬಕಾರಿ ರಕ್ಷಕ 2013
- **ಅವನೀತ** = ಸೌಜನ್ಯವಂತ, ವಿಧೇಯಭಾವದ
- **ಅವನೀತಳ** = ಭೂಮಂಡಲ
- **ಅವರ್ಣನೀಯ** = ವರ್ಣಿಸಲಾಗದ
- **ಅವಲೋಕಿಸು** = ಕಾಣಲು, ನೋಡಲು
- **ಅವಶೇಷ** = ಉಳಿಕೆ
- **ಅವಸರ** = ಅಗತ್ಯದ
- **ಅವಳಿ** = ಜೋಡಿ
- **ಅವಾಂತರ** = ಗಡಿಬಿಡಿ
- **ಅವಿತು** = ಬಚ್ಚಿಟ್ಟುಕೊಳ್ಳುವುದು
- **ಅವಿನಾಶಿ** = ನಾಶವಿಲ್ಲದ್ದು
- **ಅವ್ಯಕ್ತ** = ಕಾಣದ
- **ಅಶಕ್ಯ** = ಸಾಧ್ಯವಿಲ್ಲ
- **ಅಶನ** = ಅನ್ನ, ಆಹಾರ
- **ಅಶ್ರುಜಲ/ಅಶ್ರು** = **ಕಣ್ಣೀರು** PDO 2024
- **ಅಶ್ವದಳ** = ಕುದುರೆ ಸೇನೆ
- **ಅಷ್ಟಮೀ** = ಎಂಟನೆಯ
- **ಅಷ್ಟವಿಧ** = ಎಂಟುಬಗೆಯ
- **ಅಸಂಖ್ಯ** = ಲೆಕ್ಕವಿಲ್ಲದಷ್ಟು
- **ಅಸಂಭವ** = ಸಾಧ್ಯವಾಗದ
- **ಅಸಕಳಿ** = ಮೀರು, ಅತಿಕ್ರಮಿಸು
- **ಅಸಗೆಟ್ಟಿತ್ತು** = ಗಡ್ಡೆ
- **ಅಸದ** = ಅಸಾಧ್ಯ, ಅತಿಶಯ
- **ಅಸದಳ** = ಅಸಾಧ್ಯ, ಅತಿಶಯ
- **ಅಸಮಬಲ** = ಸಮಾನವಲ್ಲದ ಶಕ್ತಿ ಉಳ್ಳವರು
- **ಅಸಮಾಧಾನ** = ಬೇಸರ, ಅತೃಪ್ತಿ
- **ಅಸಹನೀಯ** = ಸಹಿಸಲು ಸಾಧ್ಯವಿಲ್ಲದ, ತಡೆಯಲಾಗದ
- **ಅಸಿ** = ಖಡ್ಗ, ಯುದ್ಧ, ಅಳವಿ, ಸಮರ
- **ಅಸಿಯರೆ** = ಅರೆಯುವ ಕಲ್ಲಿನಲ್ಲಿಟ್ಟು ಜಜ್ಜು GPSTR 2019
- **ಅಸು** = ಪ್ರಾಣ, ಜೀವ Group C 2016
- **ಅಸುರ** = ರಾಕ್ಷಸ
- **ಅಸೂಯೆ** = ಹೊಟ್ಟೆಕಿಚ್ಚು
- **ಅಸ್ತಿತ್ವ** = ಇರುವಿಕೆ
- **ಅಸ್ತಿಭಾರ** = ಬುನಾದಿ
- **ಅಸ್ತ್ರ** = ಆಯುಧ
- **ಅಹಂ** = ಗರ್ವ, ಪ್ರತಿಷ್ಠೆ
- **ಅಹಮಿಕೆ** = ಅಹಂಕಾರ
- **ಅಹಿಕೇತನ** = ಸರ್ಪ ಧ್ವಜ, ದುರ್ಯೋಧನ.
- **ಅಹಿತ** = ಕೆಟ್ಟದು, ಶತ್ರು
- **ಅಹಿತರು** = ಹಿತವಲ್ಲದವರು, ವೈರಿಗಳು
- **ಅಳಲು/ಅಳಲ್** = ದುಃಖ, ನೋವು
- **ಅಳವು** = ಪರಾಕ್ರಮ
- **ಅಳವೇ** = ಸಾಧ್ಯವೇ
- **ಅಳಿ** = (ಕ್ರಿ) ನಾಶ (ನಾ) ದುಂಬಿ ಸಾಯು, ನಾಶಹೊಂದು
- **ಅಳಿನಿ** = ಹೆಣ್ಣುದುಂಬಿ FDA 2021
- **ಅಳಿಪು** = ಮೋಹಕ್ಕೆ ಸಿಲುಕಿ
- **ಅಳಿಮನ** = ದೃಢವಲ್ಲದ ಮನಸ್ಸು, ಅಸ್ಥಿರವಾದ ಮನಸ್ಸು
- **ಅಳಿಯಾಸೆ** = ಈಡೇರದ ಆಸೆ
- **ಅಳಿವು** = ನಾಶ
- **ಅಳೆಯಟ್ಟು** = ಹೊಡೆದೋಡಿಸು
- **ಅಳ್ಕರಿಂ** = ಅಕ್ಕರೆಯಿಂದ, ಪ್ರೀತಿಯಿಂದ
- **ಅಳ್ಕರು** = ಪ್ರೀತಿ
- **ಅಳ್ಕಿ** = ನಾಚಿ
- **ಅಳ್ದು** = ಮುಳುಗಿ
- **ಆಂಡ್** = ಆಯಿತು
- **ಆಂದೋಲನ** = ಚಳುವಳಿ, ಕ್ರಾಂತಿ
- **ಆಂಬರಂ** = ನನ್ನವರೆಗೂ
- **ಆಕರ** = ಮೂಲ, ಆಧಾರ
- **ಆಕರ್ಷಿಸು** = ಸೆಳೆ
- **ಆಕಾಶವಾಣಿ** = ಆಕಾಶದಲ್ಲಿ ಕೇಳುವ ಧ್ವನಿ, ರೇಡಿಯೋ, ಬಾನುಲಿ
- **ಆಗರ** = ಕಣಜ, ನೆಲೆ, ಗಣಿ
- **ಆಗಸ** = ಆಕಾಶ, ಗಗನ
- **ಆಘಾತ** = ಪೆಟ್ಟು, ಕೇಡು
- **ಆಚಾರ** = ಆಚರಣೆ, ಸಂಪ್ರದಾಯ, ಕಟ್ಟುಪಾಡು, ಒಳ್ಳೆಯ ನಡತೆ

- **ಆಚ್ಛಾದನ** = ಬಟ್ಟೆ, ವಸ್ತ್ರ
- **ಆಚ್ಛಾದಿತ** = ಆವರಿಸಿದ
- **ಆಚ್ಛಾದಿತ** = ಮುಚ್ಚಲ್ಪಟ್ಟ
- **ಆಜಾನುಬಾಹು** = ನೀಳವಾದ ತೋಳು ಉಳ್ಳವ FDA 2021
- **ಆಜಿ** = **ಯುದ್ಧ, ಧುರ, ಬವರ**, ಜಗಳ Group C 2016
- **ಆಜುಬಾಜು** = ಅಕ್ಕಪಕ್ಕ, ನೆರೆಹೊರೆ
- **ಆಜ್ಞೆ** = ಅಪ್ಪಣೆ, ಆದೇಶ, ಆಣತಿ
- **ಆಜ್ಯ** = ತುಪ್ಪ, ಘೃತ
- **ಆಟಿ** = ಸೋಣ = ಆಷಾಡ, ಶ್ರಾವಣ
- **ಆಡುಂಬೊಲ** = ಆಟದ ಬಯಲು
- **ಆಣ್ಮ** = ಒಡೆಯ, ಸ್ವಾಮಿ, ರಾಜ.
- **ಆತಂಕ** = ಭಯ, ಅಡ್ಡಿ
- **ಆತ್ಮ** = ತನ್ನ
- **ಆತ್ಮ ಪರಿನಿರ್ವಾಣ** = ಮೋಕ್ಷ, ಮುಕ್ತಿ, ಆತ್ಮದ ಬಿಡುಗಡೆ
- **ಆತ್ಮಗತದೊಳೆ** = ಮನಸ್ಸಿನಲ್ಲೇ, ತನಗೆ ತಾನೆ ಹೇಳಿಕೊಳ್ಳುವುದು
- **ಆತ್ಮಪರಿನಿರ್ವಾಣ** = ಮೋಕ್ಷ, ಮುಕ್ತಿ, ಆತ್ಮದ ಬಿಡುಗಡೆ
- **ಆದರ** = ಗೌರವ, ಪ್ರೀತಿ, ಉಪಚಾರ
- **ಆದಿ** = ಮೊದಲು
- **ಆದಿಮ** = ಮೂಲದ, ಆದಿಕಾಲದ
- **ಆದೇಶ** = ಆಜ್ಞೆ, ಅಪ್ಪಣೆ
- **ಆದ್ಯರ್** = ಮೊದಲಾದವರು
- **ಆದ್ರತೆ** = ನೀರಿನ ಅಂಶ, ತೇವಾಂಶ
- **ಆಧಿಪತ್ಯ** = ಯಜಮಾನಿಕೆ
- **ಆನನ** = ಮುಖ
- **ಆನು** = ತಾಳು
- **ಆಪತ್ತಿನೊಳ್** = ಕಷ್ಟಕಾಲದಲ್ಲಿ
- **ಆಪೆ** = ಸಮರ್ಥನಾಗುವೆ
- **ಆಪೋಶನ** – ಊಟದ ಮೊದಲು ಮತ್ತು ನಂತರ ಅಂಗೈಯಲ್ಲಿ ಹಾಕಿಕೊಂಡು ಕುಡಿಯುವ ನೀರು/ಹಾಲು
- **ಆಭರಣ** = ಒಡವೆ
- **ಆಮಲಕ** = ನೆಲ್ಲಿಕಾಯಿ
- **ಆಮ್ರ** = ಮಾವು
- **ಆಯುಃಪ್ರಾಣಂ** = ಆಯುಷ್ಯ & ಪ್ರಾಣ
- **ಆಯೋಜಿಸು** = ಏರ್ಪಾಡುಮಾಡು, ವ್ಯವಸ್ಥೆಗೊಳಿಸು
- **ಆರಯ** = ಪಾಲನೆ
- **ಆರವೆ** (ಆರಮೆ) = ಉದ್ಯಾನ
- **ಆರಾಧನೆ** = ಪೂಜೆ, ಧ್ಯಾನ
- **ಆರಾಧಿಸು** = ಪೂಜಿಸು, ಸ್ಮರಿಸು
- **ಆರೈದು** = ಹುಡುಕಾಡಿ
- **ಆರೋಗಿಸು** = ಸೇವಿಸು
- **ಆರ್ತ** = ಸಮರ್ಥ, ದುಃಖಿತ, ಕಷ್ಟಕ್ಕೆ ಸಿಲುಕಿದ
- **ಆರ್ತ ಸ್ವರ** = ನೋವಿನ ಧ್ವನಿ, ಸಂಕಟದ ಧ್ವನಿ
- **ಆರ್ತನಾದ** = ಕಷ್ಟಕ್ಕೆ ಸಿಕ್ಕಿದವರ ಕೂಗು
- **ಆರ್ತೆ** = ದುಃಖಿತೆ
- **ಆರ್ತೆನಿಲ್ಲ** = ಸಮರ್ಥಳಿಲ್ಲ
- **ಆರ್ದ್ರತೆ** = ನೀರಿನ ಅಂಶ, ತೇವಾಂಶ
- **ಆರ್ಪರ್** = ಸಮರ್ಥರು
- **ಆಲಂಗಿಸು** = ಅಪ್ಪಿಕೊಳ್ಳು
- **ಆಲಿಸು** = ಕೇಳು, ಮನವಿಟ್ಟು ಕೇಳು
- **ಆಲೆ** = ಕಬ್ಬಿನ ರಸ ತೆಗೆಯುವ ಯಂತ್ರ, ಗಾಣ
- **ಆವ ಗಹನ** = ಅದು ಯಾವ ಕಷ್ಟ
- **ಆವಗಹನ** = ಅದು ಯಾವ ಕಷ್ಟ
- **ಆವಾರ** = ಆವರಣ
- **ಆವಾಹಿಸು** = ನೆಲೆಗೊಳಿಸು
- **ಆವಾಹಿಸು** = ಮೈಮೇಲೆ ಬರುವಂತೆ ಮಾಡಿಕೊ FDA 2017
- **ಆವು** = ನಾವು/ಹಸು
- **ಆಶಾ** = ಆಸೆ
- **ಆಶಾದಾಯಕ** = ಭರವಸೆಯಿಂದ ಕೂಡಿದ
- **ಆಶಿಸು** = ಬಯಸು
- **ಆಶ್ಚರ್ಯ** = ವಿಸ್ಮಯ, ಬೆರಗು, ಉತ್ಸುಕತೆ
- **ಆಶ್ಚರ್ಯ**(ತ್ಸ) = ಅಚ್ಚರಿ(ದ್ಭ), ಬೆರಗು
- **ಆಶ್ರಯ** (ತ್ಸ) = ಆಸರೆ (ದ್ಭ) ಅವಲಂಬನೆ
- **ಆಶ್ರಯ** = ಆಸರೆ, ಸಹಾಯ, ರಕ್ಷಣೆ
- **ಆಶ್ವೀಜ** = ಚೈತ್ರದಿಂದ ಏಳನೆಯ ಮಾಸ (ಆಶ್ವಯುಜ)
- **ಆಷಾಢಭೂತಿ** = ಕಪಟಿ
- **ಆಸನ** = ಕುಳಿತುಕೊಳ್ಳುವ ಸಾಧನ
- **ಆಸರ್** = ಬಳಲಿಕೆ, ದಣಿವು
- **ಆಸುರತರ** = ಅತಿಭಯಂಕರ
- **ಆಸ್ಥಾನ** = ರಾಜಸಭೆ, ದರ್ಬಾರು
- **ಆಸ್ಥೆ** = ಕಾಳಜಿ, ಶ್ರದ್ಧೆ
- **ಆಸ್ವಾದಿಸು** = ರುಚಿ ನೋಡುವುದು, ಸವಿಯುವುದು
- **ಆಹವ** = ಯುದ್ಧ, ಅನುವರ, ಕಾಳಗ, ಸಮರ, **ಬಂಡಣ** Group C 2023
- **ಆಹುತಿ** = ಬಲಿ
- **ಆಳು** = ಸೇವಕ
- **ಆಳ್ವೆ** = ಆಳುವೆ
- **ಆಳ್ವೆಸ** = ಆಳಿನ ಕೆಲಸ (ಆಳ್+ಬೆಸ=ಆಳ್ವೆಸ) ಆದೇಶಸಂಧಿ
- **ಇಂಗಿತ** = ಆಶಯ
- **ಇಂಗು** = ಒಣಗು, ಬತ್ತು
- **ಇಂಗೋಗ್ಲಿ** = ಕಡಿಮೆಯಾಗಲಿ, ಬತ್ತಿಹೋಗಲಿ
- **ಇಂಚರ** = ಇಂಪಾದ ದನಿ, ಮಧುರ ದನಿ
- **ಇಂತು** = ಹೀಗೆ
- **ಇಂದುಧರ** = ಚಂದ್ರನನ್ನು ಧರಿಸಿರುವವ, ಶಿವ
- **ಇಂದ್ರಪದವಿ** = ಇಂದ್ರನ ಪದವಿ (ಷಷ್ಠಿ ತತ್ಪುರುಷ ಸಮಾಸ)
- **ಇಂಪು** = ಮಧುರ
- **ಇಂಬು** = ಅವಕಾಶ, ಪ್ರೀತಿ, ಎಡೆ, ದಾರಿ
- **ಇಂಬುಕೆಯ್ವೆ** = ಒಪ್ಪಿಕೊಳ್ಳಲು, ಸಮ್ಮತಿ ಸೂಚಿಸಲು
- **ಇಕ್ಕಟ್ಟು** = ಸಂದಿಗ್ಧ, ಕಿರಿದಾದ
- **ಇಕ್ಕಿ** = ಬಡಿದು, ಹೊಡೆದು

- **ಇಕ್ಕು** = ಇಡು, ಬಡಿಸು
- **ಇಗರ್ಜಿ** = ಚರ್ಚು
- **ಇಟ್ಟು** (ಕ್ರಿ) = ಇಡುವುದು, ಊಟಕ್ಕೆ ನೀಡಿ
- **ಇತ್ಯರ್ಥ** ತೀರ್ಮಾನ
- **ಇದಿರ್ಚಿ** = ಹೋರಾಡಿ
- **ಇದಿರ್ಚು** = ಎದುರಿಸು
- **ಇನಜ** = ಕರ್ಣ Group C 2023
- **ಇನಾಮು** = ಬಹುಮಾನ
- **ಇನಿತು** = ಇಷ್ಟು
- **ಇನಿಸಿನಿಸು** = ಇಷ್ಟಿಷ್ಟು
- **ಇಬ್ಬನಿ** = ಮಂಜಿನ ಹನಿ
- **ಇಭದೋ** = ಆನೆಗಳ ಸೊಂಡಿಲು
- **ಇಭವೈರಿ** = ಸಿಂಹ
- **ಇಭಶೈಲ** = ಆನೆಗಳ ಬೆಟ್ಟ
- **ಇರಕೆ** = ಇರುವಿಕೆಗೆ
- **ಇರಾದೆ** = ಉದ್ದೇಶ
- **ಇರಿ** = ಕೊಲ್ಲು, ತಿವಿ, ಕತ್ತರಿಸು, ಚುಚ್ಚು
- **ಇರುಳು** = ಕತ್ತಲೆ, ರಾತ್ರಿ
- **ಇರುಳುಗಣ್ಣು** = ಕತ್ತಲಾದಂತೆ ಕಣ್ಣು ಕಾಣದಿರುವುದು
- **ಇರುಳುಗಾಳಗ** = ರಾತ್ರಿಯುದ್ಧ
- **ಇರೆ** = ಇರಲು
- **ಇರ್ಕುಂ** = ಇರುವವರು
- **ಇರ್ಕೆ** = ಇರಲಿ
- **ಇರ್ಬರು** = ಇಬ್ಬರು
- **ಇರ್ವಲಂ** = ಎರಡೂ ಸೈನ್ಯ
- **ಇಷ್ಟ** = ಇಚ್ಛೆ, ಮೆಚ್ಚುಗೆ
- **ಇಹಲೋಕ** = ಭೂಲೋಕ
- **ಇಹುದು** = ಇದೆ
- **ಇಳಿ** (ಕ್ರಿ) = ಕೆಳಕ್ಕೆ ಬರು, ಬೀಳು
- **ಇಳೆ** = ಭೂಮಿ, ಧರೆ GPSTR 2017
- **ಈಗುಂ** = ಕೊಡುವುದು, ಕೊಡಬಲ್ಲುದು
- **ಈಚಲು** = ತಾಳೆಯ ಜಾತಿಗೆ ಸೇರಿದ ಮರ
- **ಈಡು** = ಸಮಾನ
- **ಈಡೇರು** = ನೆರವೇರು FDA 2018
- **ಈದುದೋ** = ಹೆತ್ತಿದೆಯೋ, ಮರಿಹಾಕಿದೆಯೋ
- **ಈಯದೆ** = ಬಿಡದೆ
- **ಈಯೆನ್** = ಕೊಡುವುದಿಲ್ಲ
- **ಈರ್ಷ್ಯೆ** = ಅಸೂಯೆ, ಹೊಟ್ಟೆಕಿಚ್ಚು
- **ಈಶ್ವರ** = ಒಡೆಯ
- **ಉಂಡಲಿಗೆ** = ಕಡಬು FDA 2021
- **ಉಂಬು** = ತಿನ್ನು, ಸೇವಿಸು
- **ಉಕ್ಕಂದ** = ಉತ್ಸಾಹ, ಹುರುಪು
- **ಉಕ್ಕೇರು** = ಹೆಚ್ಚಾಗು
- **ಉಕ್ಕ್ಯಾಳ** = ಉತ್ಸಾಹ, ಉಬ್ಬಿಹೋಗು
- **ಉಗ್ರಾಣಿ** = ಗ್ರಾಮ ಸಹಾಯಕ (ಶಾನುಭೋಗರ ಸಹಾಯಕ)
- **ಉಚಿತ** = ಯೋಗ್ಯ
- **ಉಚ್ಛಿಷ್ಟ** = ಎಂಜಲು, ತಿಂದು ಮಿಕ್ಕಿದ್ದು
- **ಉಜ್ವಲ** = ಪ್ರಕಾಶ, ಬೆಳಗುವ, ಹೊಳೆಯುವ, ಪ್ರಕಾಶಮಾನ, ಶ್ರೇಷ್ಠವಾದ
- **ಉಡಿ** = ಮಡಿಲು
- **ಉಡಿದಿರ್ದ** = ಮುರಿದ
- **ಉಡುರಾಜ** = ನಕ್ಷತ್ರಾಧಿಪತಿ, ಚಂದ್ರ
- **ಉಣದಿರು** = ಅನುಭೋಗಿಸಲಾಗದ
- **ಉಣದಿರ್ಪ** = ಅನುಭೋಗಿಸಲಾಗದ
- **ಉಣ್ಮು** = ಉಬ್ಬಿರುವ, ಉಂಟಾಗು, ಹುಟ್ಟು, ಮೇಲೇಳು, ಉಬ್ಬು
- **ಉತ್ಕಂಠತೆ** = ಉತ್ಸುಕತೆ
- **ಉತ್ಕಟ** = ಅಧಿಕ, ಪ್ರಬಲವಾದ
- **ಉತ್ಕರ್ಷ** = ಅಭಿವೃದ್ಧಿ, ಏಳಿಗೆ VAO 2024
- **ಉತ್ಖನನ** = ಪ್ರಾಚೀನ ಅವಶೇಷಗಳ ಶೋಧ GPSTR 2017
- **ಉತ್ತ** = ಸೊಕ್ಕಿದ, ಕೊಬ್ಬಿದ
- **ಉತ್ತುತ್ತಿ** = ಒಣ ಖರ್ಜೂರ
- **ಉತ್ತಮನಾಚರಿಸಿ** = ಒಳ್ಳೆಯದನ್ನು ಆಚರಿಸಿ ಅಬಕಾರಿ ರಕ್ಷಕ 2013
- **ಉತ್ತಾರಣ** = ದಾಟುವಿಕೆ
- **ಉತ್ತುಂಗ** = ಎತ್ತರವಾದ, ಶ್ರೇಷ್ಠ
- **ಉತ್ಪಾಟನ** = ನಾಶಗೊಳಿಸುವುದು
- **ಉತ್ಪ್ರೇಕ್ಷೆ** = ಅಧಿಕವಾಗಿ ವರ್ಣಿಸುವುದು
- **ಉದಕ** = ನೀರು
- **ಉದಯ** = ಹುಟ್ಟುಮೂಡು, ನೀರು
- **ಉದಾತ್ತ** = ಉನ್ನತ, ಘನತೆಯುಳ್ಳ, ಶ್ರೇಷ್ಠ GPSTR 2017
- **ಉದಾತ್ತರೊಳ್** = ಶ್ರೇಷ್ಠರಾದವರಲ್ಲಿ
- **ಉದ್ಗರಿಸು** = ಹೇಳು, ಹೊರಗೆಡಹು
- **ಉದ್ಗಾತೃ** = ಋತ್ವಿಜ, ಯಜ್ಞದಲ್ಲಿ ಸಾಮಗಾನವನ್ನು ಹಾಡುವವನು
- **ಉದ್ದೀಪನ** = ಉತ್ತೇಜನ, ಉರಿಸುವ
- **ಉದ್ಧರಣೆ** = ತೀರ್ಥದ ಸಣ್ಣ ಚಮಚ
- **ಉದ್ಧರಿಸು** = ಉದಾಹರಿಸು, ಇತರರು ಹೇಳಿದ ಮಾತನ್ನು ಎತ್ತಿ ಹೇಳುವುದು
- **ಉದ್ಧೂಳಿಸು** = ಲೇಪಿಸು
- **ಉದ್ಯುಕ್ತ** = ಪ್ರಯತ್ನಿಸು, ಸಿದ್ಧವಾಗು, ಕೆಲಸದಲ್ಲಿ ತೊಡಗಿದ
- **ಉದ್ಯೋಗ** = ಜಂಗಮ = ಚಲನಶೀಲ, ಲೋಕಸಂಚಾರಿ
- **ಉದ್ಯೋಗಿಸಿದರು** = ಪ್ರಯತ್ನಿಸಿದರು
- **ಉದ್ರೇಕ** = ಅತಿಶಯ, ಮೇರೆಮೀರು
- **ಉದ್ವೃತ್ತ** = ಸೊಕ್ಕಿದ, ಕೊಬ್ಬಿದ
- **ಉದ್ವೇಗಪರ** = ಆವೇಶದಿಂದ, ತಳಮಳದಿಂದ
- **ಉನ್ನತ** = ಎತ್ತರವಾದ, ಮೇಲಾದ
- **ಉನ್ಮತ್ತ** = ಕೊಬ್ಬಿದ, ಮದಿಸಿದ
- **ಉಪಕರಿಸು** = ಉಪಕಾರ ಮಾಡು, ನೆರವು ನೀಡು
- **ಉಪಕಾರ** = ಸಹಾಯ
- **ಉಪಕ್ರಮ** = ಪ್ರಾರಂಭ, ತೊಡಗು
- **ಉಪಕ್ರಮಿಸು** = ಪ್ರಾರಂಭ, ತೊಡಗುವಿಕೆ
- **ಉಪಟಳ** = ಹಿಂಸೆ, ತೊಂದರೆ, ಉಪದ್ರವ




# QUALITY SPEAKS

## Topexams ಸಾಮಾನ್ಯ ಕನ್ನಡ

ನಿಮ್ಮ ಪುಸ್ತಕವನ್ನು ಇಂದೇ ಕಾಯ್ದಿರಿಸಿ.

Offer Price 400/- MRP 460/- | **Free Delivery** All over India

Google Pay or Phone pay 8880015000 ಮಾಡಿ. ನಿಮ್ಮ ವಿಳಾಸವನ್ನು Whatsapp ಗೆ ಕಳುಹಿಸಿ.

Contact For Books 88800-15000




ರಾಜ್ಯದ ಎಲ್ಲಾ ಪ್ರಮುಖ ಪುಸ್ತಕ ಮಳಿಗೆಗಳಲ್ಲಿ ಮತ್ತು ಆನ್‌ಲೈನ್‌ನಲ್ಲಿ ದೊರೆಯುತ್ತದೆ.

ಇತರೆ ಮಳಿಗೆಗಳಲ್ಲಿ ಆಫರ್ ಬೇರೆ ಬೇರೆ ಇರುತ್ತದೆ.

amazon.in | Flipkart | meesho

99027-37486 / 90355-32100

# ಅಧ್ಯಾಯ 2 ದ್ರಾವಿಡ ಭಾಷೆ & ಕನ್ನಡ ಭಾಷೆಯ ಹುಟ್ಟು


**SDA, FDA, Group C, KTET, KSET, HSTR ಅಭ್ಯರ್ಥಿಗಳು ತಪ್ಪದೇ ಕಲಿಯಬೇಕು.**

ಭಾರತದಲ್ಲಿ ಅನೇಕ ಭಾಷೆಗಳಿದ್ದು ಈ ಎಲ್ಲಾ ಭಾಷೆಗಳು ಒಂದು ಮೂಲ ಭಾಷೆಯಾಗಿಯೂ ಅಥವಾ ಒಂದು ಮೂಲ ಭಾಷೆಯಿಂದ ಹೊರಬಂದ ಉಪಭಾಷೆಯಾಗಿರುತ್ತದೆ. ಇವುಗಳಲ್ಲಿ ಮುಖ್ಯವಾಗಿ ದಕ್ಷಿಣ ಭಾರತದ ಭಾಗದಲ್ಲಿ ಬಳಸಲ್ಪಡುವ ಬಹುತೇಕ ಭಾಷೆಗಳಿಗಳು ಮೂಲ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಉಪಭಾಷೆಗಳಾಗಿವೆ. ಉದಾಹರಣೆಗೆ **ಕನ್ನಡ, ತೆಲುಗು, ತಮಿಳು** ಇತ್ಯಾದಿ..

ಸುಮಾರು **2500** ವರ್ಷಗಳ ಹಿಂದೆ ಮಾತೃಭಾಷೆಯಿಂದ ಕವಲೊಡೆದು ಕನ್ನಡ ಭಾಷೆಯು ಸಂಸ್ಕೃತದ ಪೋಷಣೆಯೊಂದಿಗೆ ಒಂದು ಸ್ವತಂತ್ರ ಭಾಷೆಯಾಗಿ ಬೆಳೆದು ಬಂದಿದೆ. ಇಂದು ನಾವು ಮಾತನಾಡುವ ಕನ್ನಡ ದ್ರಾವಿಡ ಭಾಷೆಯ ಒಂದು ಕವಲು.

ಭಾರತದಲ್ಲಿರುವ ಅನೇಕ ಭಾಷಾಲಿಪಿಗಳಿಗೂ ಅಶೋಕನ ಶಾಸನಗಳಲ್ಲಿ ವ್ಯಾಪಕವಾಗಿ ಬಳಕೆಯಾಗಿರುವ **ಬ್ರಾಹ್ಮಿ ಲಿಪಿ**ಯೇ ಮೂಲ. ಕನ್ನಡದ ಅಕ್ಷರಗಳೂ ಬ್ರಾಹ್ಮಿ ಲಿಪಿಯಿಂದಲೇ ರೂಪಗೊಂಡಿವೆ. । ನೇಪಾಳ ಪ್ರದೇಶದಲ್ಲಿರುವ ದ್ರಾವಿಡ ಭಾಷೆ – **ಧಾಂಗಲ್**

ದ್ರಾವಿಡ ಭಾಷೆಗಳು ಭಾರತೀಯ ಉಪಖಂಡದ ಒಂದು ಭಾಷಾ ಕುಟುಂಬವಾಗಿದೆ. ದ್ರಾವಿಡ ಭಾಷೆಗಳು ದಕ್ಷಿಣ ಭಾರತ, ಮಧ್ಯ ಭಾರತ, ಶ್ರೀಲಂಕಾ, ಪಾಕಿಸ್ತಾನ, ನೇಪಾಳ ಪ್ರಾಂತ್ಯಗಳಲ್ಲಿ ಬಳಕೆಯಲ್ಲಿವೆ. ದ್ರಾವಿಡ ಭಾಷೆಯನ್ನು ಒಂದು **ಸ್ವತಂತ್ರ ಭಾಷಾ ಕುಟುಂಬ**ವೆಂದೇ ಪರಿಗಣಿಸಲಾಗಿದೆ.




- ಮೊದಲ ಬಾರಿಗೆ ದ್ರಾವಿಡ ಭಾಷೆಗಳ ಅಧ್ಯಯನಕ್ಕೆ ತಳಹದಿ ಹಾಕಿದವರು ಮತ್ತು **ದ್ರಾವಿಡ ಭಾಷೆಗಳು ಸ್ವತಂತ್ರ ಭಾಷಾ ವರ್ಗ**ಕ್ಕೆ ಸೇರುತ್ತವೆ ಎಂದು **1816**ರಲ್ಲಿ **"ಫ್ರಾನ್ಸಿಸ್ ವೈಟ್ ಎಲ್ಲಿಸ್"** ತಿಳಿಸಿದರು.
- ದ್ರಾವಿಡ ಭಾಷೆಯು **ಅಂಟು ಭಾಷಾ** ವರ್ಗಕ್ಕೆ ಸೇರಿದ ಭಾಷೆಯಾಗಿದೆ.

ಅಂದರೆ ದ್ರಾವಿಡ ಭಾಷೆಯಲ್ಲಿ ಪ್ರಕೃತಿ ಮತ್ತು ಪತ್ಯಯವನ್ನು ಸೇರಿಸಿ ಪದಗಳನ್ನು ರಚಿಸಲಾಗುತ್ತದೆ ಆದ್ದರಿಂದ ದ್ರಾವಿಡ ಭಾಷೆಯನ್ನು ಅಂಟು ಭಾಷೆ ಎಂದು ಕರೆಯುತ್ತಲಾಗುತ್ತದೆ. ದ್ರಾವಿಡ ಭಾಷೆಗಳು ಭಾರತೀಯ ಉಪಖಂಡದ ಒಂದು ಭಾಷಾ ಕುಟುಂಬವಾಗಿದ್ದು, ಪ್ರಸ್ತುತ ದ್ರಾವಿಡ ಭಾಷಾ ವರ್ಗವು ಸುಮಾರು **25** ಭಾಷೆಗಳನ್ನು ಒಳಗೊಂಡಿದೆ. ಹಾಗೂ ಪ್ರಪಂಚದಲ್ಲಿನ ಹಿರಿಯ ಭಾಷಾ ಪರಿವಾರಗಳ ಶ್ರೇಣಿಯಲ್ಲಿ ಇದಕ್ಕೆ 5ನೆಯ ಸ್ಥಾನವಿದೆ. ಎಡದಿಂದ ಬಲಕ್ಕೆ ಬರೆಯುವುದು ದ್ರಾವಿಡ ಭಾಷೆಯ ಒಂದು ವಿಶೇಷತೆ. (**ದ್ರಾವಿಡ** ಪದದ ಸಂಸ್ಕೃತ ರೂಪ – **ದ್ರಮಿಳ**)

ಈಗ ಗೊತ್ತಾಗಿರುವ **25** ದ್ರಾವಿಡ ಭಾಷೆಗಳು **ಕನ್ನಡ, ತೆಲುಗು, ತಮಿಳು, ಮಲಯಾಳಂ, ತುಳು, ಕೊಡಗು, ಮಾಲ್ತೊ, ಬ್ರಾಹುಇ, ಕುರುಖ್, ಒಲ್ಲಾರಿ, ಗದಬ, ಪೆಂಗೂ, ಕುವಿ, ಕುಯಿ, ಕೊಯ, ಕೊರಗ ಕೊಂಡ, ಕೊಲಾಮಿ, ಕೋತ, ಬಡಗ, ಗೋಂದಿ, ಮಂಡ, ನಾಯ್ಕಿ, ತೊದ, ಪಾರ್ಜಿ** ಇವುಗಳಲ್ಲಿ ಮೊದಲ ನಾಲ್ಕು ಭಾಷೆಗಳು ಸಾಹಿತ್ಯಿಕ ಭಾಷೆಗಳು.

ಈ ಭಾಷೆಗಳಿಗೆ ಸಾಕಷ್ಟು ಪ್ರಾಚೀನವಾದ ಲಿಖಿತ ಸಾಹಿತ್ಯವಿದೆ. ಇವುಗಳಿಗೆ ಮೊದಲಿಂದಲೂ ತಮ್ಮದೇ ಆದ ಲಿಪಿ ಕೂಡ ಇದೆ. ತುಳು ಮತ್ತು ಕೊಡಗು ಭಾಷೆಗಳು ಅಲಿಪಿ ಭಾಷೆಗಳಾದರು ಶ್ರುರೂಪಿಯಾದ ಶ್ರವ್ಯ ಸಾಹಿತ್ಯ ಉಳಿದು ಬಂದಿರುವುದರಿಂದ ಇವನ್ನು ಸಾಹಿತ್ಯಿಕ ದ್ರಾವಿಡ ಭಾಷೆಗಳ ಜೊತೆಗೆ ಸೇರಿಸುವುದು ರೂಢಿ. ಇನ್ನುಳಿದ ಹತ್ತೊಂಬತ್ತು ಭಾಷೆಗಳನ್ನು ಶ್ರವಣ ಭಾಷೆಗಳೆಂದು ನಿರ್ದೇಶಿಸಿದ್ದಾರೆ. ಇವನ್ನು ಅಸಂಸ್ಕತ ಅಥವಾ ಅಲಿಪಿ ಭಾಷೆಗಳೆಂದೂ ಕರೆಯುತ್ತಾರೆ.

**ಭಾಷಾ ಸಮ್ಮಾನ್ ಗೌರವ ಕನ್ನಡ ಸಾಹಿತ್ಯ ಪ್ರಶಸ್ತಿ – ಜಿ. ವೆಂಕಟಸುಬ್ಬಯ್ಯ (ಪ್ರಾಚೀನ ಮತ್ತು ಮಧ್ಯಕಾಲೀನ ಸಾಹಿತ್ಯ)**

**ದ್ರಾವಿಡ ಎಂಬ ಪದವು ಮೊಟ್ಟ ಮೊದಲು – ಮಂಗಳೇಶನ ಮಹಾಕೂಟ ಶಾಸನ ಕಾಣ ಬರುತ್ತದೆ.**

ದ್ರಾವಿಡ ಭಾಷೆಗಳನ್ನು ಅವು ಭಾರತದ ಯಾವ ಯಾವ ಭಾಗದಲ್ಲಿ ಬಳಕೆಯಲ್ಲಿವೆ ಎಂಬ ಭೌಗೋಳಿಕ ಧಾರದಿಂದ ಭಾರತದಲ್ಲಿ 3 ರೀತಿಯ ದ್ರಾವಿಡ ಭಾಷೆಗಳನ್ನು ನಾವು ಕಾಣಬಹುದು. ದ್ರಾವಿಡ ಭಾಷೆಗೆ ತೌಲನಿಕ ವ್ಯಾಕರಣ ಬರೆದವರು – ಡಾ. ಕಾಲ್ಡ್ ವೆಲ್

| ದ್ರಾವಿಡ ಭಾಷೆಯನ್ನು 3 ವಿಧವಾಗಿ ವಿಂಗಡಿಸಬಹುದು | | |
|---|---|---|
| 1. ದಕ್ಷಿಣ ದ್ರಾವಿಡ ಭಾಷೆಗಳು | 2. ಮಧ್ಯ/ದಕ್ಷಿಣ ದ್ರಾವಿಡ ಭಾಷೆಗಳು | 3. ಉತ್ತರ ದ್ರಾವಿಡ ಭಾಷೆಗಳು |
| ತಮಿಳು | ತೆಲುಗು (ಚೆಂಚು) | ಬ್ರಾಹೂಈ |
| ಕನ್ನಡ | ಗೋಂದಿ (ಮದಿಯಾ, ಮುರಿಯ, ಪರ್ಧಾನ, ಖಿರ್ವಾರ, ನಾಗರ್ಚಾಲ್) | ಮಾಲ್ತೊ (ಕುಮರ್ಭಾಗ ಪಹರಿಯ) (ಸೌರಿಯಾ ಪಹರಿಯ) |
| ತೆಲುಗು | ಕೊಂಡ, ಮುಖ–ದೊರ | ಕುರುಖ್ (ಓರಾನ್, ಕಿಸಾನ್) |
| ಮಲಯಾಳಂ | ಕುಯಿ, ಕುವಿ, ಕೊಯಾ | |
| | ಮಂಡ, ಪೆಂಗೊ | |
| ತುಳು (ಕೊರಗ, ಬೆಳ್ಳಾರೆ, ಕುಡಿಯಾ) | ಮಧ್ಯ ದ್ರಾವಿಡ ಭಾಷೆಗಳು | |
| (ಕೊಡವ, ಕುರುಂಬ) (ಕೋಟ– ತೋದ) | ಕೊಲಮಿ–ನಾಯ್ಕಿ | |
| ಪಳಿಯನ್, ಬಡಗ, ಥಕ್ | ಪರ್ಜಿ–ಗಡಬ (ಒಳ್ಳಾರಿ) ದುರವ | |

**ನೆನಪಿಡಿ**

ಪಂಚ ದಕ್ಷಿಣ ದ್ರಾವಿಡ ಭಾಷೆಗಳ ಪ್ರಾಚೀನತೆಯ ಕ್ರಮಾನುಗತ

**1.** ತಮಿಳು **2.** ಕನ್ನಡ **3.** ತೆಲುಗು **4.** ಮಲಯಾಳಂ **5.** ತುಳು

- ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ತಮಿಳು ಅತ್ಯಂತ ಪ್ರಾಚೀನ ಭಾಷೆಯಾಗಿದ್ದು, ಇದಕ್ಕಿರುವ ಪುರಾವೆಗಳಲ್ಲಿ **ತೊಲ್ಕಾಪ್ಪಿಯಾ**ರವರು ಬರೆದ '**ತೊಲ್ಕಾಪ್ಪಿಯಂ**' ಅತ್ಯಂತ ಪ್ರಾಚೀನ ವ್ಯಾಕರಣ ಗ್ರಂಥವಾಗಿದೆ. ಇದರ ಕಾಲ ಕ್ರಿ.ಪೂ **3**ನೇ ಶತಮಾನ.
- ವಿದೇಶಗಳಲ್ಲಿ ಹೆಚ್ಚು ಬಳಕೆಯಲ್ಲಿರುವ ದ್ರಾವಿಡ ಭಾಷೆಯೆಂದರೆ ಅದು **ಬ್ರಾಹುಯಿ.** ಪ್ರಸುತ ಪಾಕಿಸ್ತಾನದ ಒಂದು ಭಾಗವಾದ ಬಲೂಚಿಸ್ತಾನದಲ್ಲಿ ಬ್ರಾಹುಯಿ ಭಾಷೆಯನ್ನು ಮಾತನಾಡುತ್ತಾರೆ.
- ದ್ರಾವಿಡ ಭಾಷೆಯಲ್ಲಿ ತಮಿಳನ್ನು ಹೊರತು ಪಡಿಸಿದರೆ ಕನ್ನಡವು ಅತ್ಯಂತ ಪ್ರಾಚೀನ ಭಾಷೆಯಾಗಿದೆ. ಕನ್ನಡದ ಮೊದಲ ವ್ಯಾಕರಣ ಗ್ರಂಥ: **ಶಬ್ದಮಣಿದರ್ಪಣ** ಕೃತಿಕಾರ '**ಕೇಶಿರಾಜ**' ಕಾಲ: **1260 / 13**ನೇ ಶತಮಾನ.
- ದ್ರಾವಿಡ ಭಾಷೆಗಳಲ್ಲಿ ತಮಿಳು ಭಾಷೆಯು ಪೂರ್ವದ ಹಳಗನ್ನಡದೊಂದಿಗೆ ಹೆಚ್ಚು ಹತ್ತಿರವಾಗಿದೆ. ಅದೇ ರೀತಿ ಕನ್ನಡ ಭಾಷೆಯಲ್ಲಿ ಸಂಸ್ಕೃತ ಭಾಷೆಯ ಪ್ರಭಾವವು ಹೆಚ್ಚಾಗಿದ್ದರು, **ತಮಿಳು** ಭಾಷೆಯ ಮೇಲೆ ಸಂಸ್ಕೃತದ ಪ್ರಭಾವ ಅತಿ ಕಡಿಮೆ ಇದೆ.
- ದ್ರಾವಿಡ ಭಾಷೆಯಲ್ಲಿ ಅತಿ ಹೆಚ್ಚು ಜನರು ಮಾತನಾಡುವ ಭಾಷೆಯೆಂದರೆ **ತೆಲುಗು.**
- **ಬ್ರಾಹ್ಮಿ ಲಿಪಿ**ಯಿಂದ ರೂಪುಗೊಂಡ ಕನ್ನಡ ಲಿಪಿಯನ್ನು ಉಪಯೋಗಿಸಿ ಕನ್ನಡ ಭಾಷೆಯನ್ನು ಬರೆಯಲಾಗುತ್ತದೆ. **ವಿನೋಬಾ ಭಾವೆ** ಕನ್ನಡ ಲಿಪಿಯನ್ನು **ಲಿಪಿಗಳ ರಾಣಿ**ಯೆಂದು ಹೊಗಳಿದ್ದಾರೆ.
- ದ್ರಾವಿಡ ಭಾಷೆಗಳು ಯಾವುದೇ ಬೇರೆಯ ಭಾಷಾಕುಟುಂಬಕ್ಕೆ ಸೇರಿದೆಯೇ ಎಂದು ತಿಳಿದುಕೊಳ್ಳಲು ಬಹಳ ಸಂಶೋಧನೆಗಳು ನಡೆದಿವೆಯಾದರೂ, ಖಚಿತವಾದ ಸಂಬಂಧವು ಈವರೆಗೂ ದೊರೆತಿಲ್ಲ. ಹೀಗಾಗಿ ಇದನ್ನು ಒಂದು **ಸ್ವತಂತ್ರ ಭಾಷಾ ಕುಟುಂಬ**ವೆಂದೇ ಪರಿಗಣಿಸಲಾಗಿದೆ.

**ದಾವಿಡ ಭಾಷೆಯಲ್ಲಿ ಇರುವ ವ್ಯಾಕರಣದ ಮುಖ್ಯ ಅಂಶಗಳು**

- ದ್ರಾವಿಡ ಭಾಷೆಯಲ್ಲಿ **ಲಿಂಗವ್ಯವಸ್ಥೆಯ** ತಳಹದಿ. ಬುದ್ಧಿಇರುವ (ಸಬುದ್ಧಿಕ) ಮತ್ತು ಬುದ್ಧಿಇಲ್ಲದಿರುವ (ಅಬುದ್ಧಿಕ) ಆಗಿದೆ.
- ದ್ರಾವಿಡ ಭಾಷೆಯಲ್ಲಿ ಲಿಂಗವ್ಯವಸ್ಥೆಯಿಲ್ಲದ ಭಾಷೆಗಳೆಂದರೆ ತೊದ ಮತ್ತು ಬ್ರಾಹೂಈ
- ಪೂರ್ವದ್ರಾವಿಡದ ಕ ಕಾರವು ತಾಲವ್ಯೀಕರಣಗೊಳ್ಳದ ಭಾಷೆ – **ಕನ್ನಡ.**
- ದ್ರಾವಿಡ ಭಾಷೆಗಳ ಕ್ರಿಯಾ ಪದಗಳಲ್ಲಿರುವ ಕಾಲಗಳ ಸಂಖ್ಯೆ – **ಎರಡು**
- ದ್ರಾವಿಡ ಭಾಷೆಗಳಲ್ಲಿ **ಕರ್ಮಣಿ ಪ್ರಯೋಗವಿಲ್ಲ.**

**ನೆನಪಿಡಿ**

ಕನ್ನಡ, ತೆಲುಗು, ತಮಿಳು, ಮಲಯಾಳಂ & ತುಳು ಈ ಐದು ಭಾಷೆಗಳನ್ನು ಪಂಚ–ದ್ರಾವಿಡ ಭಾಷೆಗಳೆಂದು ಕರೆಯುತ್ತಾರೆ.

**ಸಂವಿಧಾನದ 8ನೇ ಪರಿಚ್ಛೇದದಂತೆ ಭಾರತದಲ್ಲಿರುವ ಒಟ್ಟು 22 ಅಧಿಕೃತ ಭಾಷೆಗಳಲ್ಲಿ ಕನ್ನಡವು ಕೂಡ ಒಂದು.**

## ಭಾಷಾವಿಜ್ಞಾನದ ಕೃತಿಗಳು

| ಕೃತಿಗಳು | ವಿದ್ವಾಂಸರು |
|---|---|
| ದ್ರಾವಿಡ ಭಾಷಾ ವಿಜ್ಞಾನ | ಹಂ. ಪ. ನಾಗರಾಜಯ್ಯ |
| ಭಾಷಾ ವಿಜ್ಞಾನ | ಹಂ. ಪ. ನಾಗರಾಜಯ್ಯ |
| ಕನ್ನಡಭಾಷಾ ವಿವೇಚನೆ | ವ್ಹಿ. ಜಿ. ಪೂಜಾರ |
| ದ್ರಾವಿಡ ಭಾಷಾ ವ್ಯಾಸಂಗ ಕನ್ನಡ ಭಾಷಾ ವ್ಯಾಸಂಗ | ಸಂಗಮೇಶ ಸವದತ್ತಿ ಮಠ |
| ಉಪಭಾಷೆ | ಕೃಷ್ಣಪರಮೇಶ ಭಟ್ಟ |
| ಕನ್ನಡ ಭಾಷಾ ಸ್ವರೂಪ | ಕೆ. ಅನಂತರಾಮು |
| ಶಾರದೆಯ ಸಂಸಾರ | ಶ್ರೀರಂಗ |
| ಭಾಷಾ ವಿಜ್ಞಾನದ ಮೂಲ ತತ್ವಗಳು | ಎಂ. ಚಿದಾನಂದಮೂರ್ತಿ |
| ಕನ್ನಡ ಭಾಷಾ ಚರಿತ್ರೆ | ಸಾ. ಶಿ. ಮರುಳಯ್ಯ |
| ವರ್ಣನಾತ್ಮಕ ವ್ಯಾಕರಣದ ಮೂಲತತ್ವಗಳು | ಎಚ್. ಎಸ್. ಬಿಳಿಗಿರಿ ಆಲೋಕ – 1, 2 |
| ಕನ್ನಡ ಭಾಷಾಶಾಸ್ತ್ರ | ರಾ. ಯ. ಧಾರವಾಡಕರ್ |
| ಕನ್ನಡ ವಾಕ್ಯಗಳು | ಡಿ. ಎನ್ . ಶಂಕರಭಟ್ಟ |
| ಕನ್ನಡ ಕಲ್ಪಿತ ಭಾಷೆಯ ಚರಿತ್ರೆ | ಡಿ. ಎನ್. ಶಂಕರಭಟ್ಟ |
| ಜನಪದ ಭಾಷಾ ಸಮೀಕ್ಷೆ | ಸಂಗಮೇಶ ಸವದತ್ತಿಮಠ |
| ವರ್ಣನಾತ್ಮಕ ಭಾಷಾ ವಿಜ್ಞಾನ | ಜಿ. ಎಸ್ . ಕುಳ್ಳಿ |
| ಐತಿಹಾಸಿಕ ಭಾಷಾ ವಿಜ್ಞಾನ | ಜಿ. ಎಸ್ . ಕುಳ್ಳಿ |
| ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ | ಎಂ. ಎಚ್ . ಕೃಷ್ಣಯ್ಯ |
| ಕನ್ನಡ ಭಾಷಾ ಚರಿತ್ರೆ | ಕೆ. ಕೆಂಪೇಗೌಡ |
| ಕರ್ನಾಟಕ ಸಂಸ್ಕೃತಿ ಸಮೀಕ್ಷೆ | ಎಚ್. ತಿಪ್ಪೇರುದ್ರಸ್ವಾಮಿ |
| ಡಿ.ಎಲ್. ನರಸಿಂಹಾಚಾರ್ | ಶಬ್ದವಿಹಾರ |
| ತೌಲನಿಕ ವ್ಯಾಕರಣ | ಡಾಕ್ಟರ್ ಕಾಲ್ಡ್ ವೆಲ್ |

## ಈ ಹಿಂದೆ ನಡೆದ ಪರೀಕ್ಷೆಗಳಲ್ಲಿ ಈ ವಿಷಯದ ಮೇಲೆ ಕೇಳಲಾದ ಪ್ರಶ್ನೆಗಳು

**1. ಕನ್ನಡವು ---------ಜನಾಂಗಕ್ಕೆ ಸಂಬಂಧಿಸಿದ ಭಾಷೆಯಾಗಿದೆ.** FDA 1991

(1) ಆರ್ಯ (2) ದ್ರಾವಿಡ

(3) ಆಸ್ಟ್ರಿಕ್ (4) ನೀಗ್ರೋ

**2. ಕನ್ನಡವು ------- ಭಾಷಾ ವರ್ಗಕ್ಕೆ ಸೇರಿದ ಭಾಷೆಯಾಗಿದೆ.** FDA 1997

(1) ಇಂಡೋ ಯೂರೋಪಿಯನ್ (2) ದ್ರಾವಿಡ

(3) ಸೈನೋ ಟಿಬೆಟಿಯನ್ (4) ಆಸ್ಟ್ರೋ ಏಷಿಯಾಟಿಕ

**3. ದ್ರಾವಿಡ ಭಾಷೆಗಳಲ್ಲಿ ಮೊತ್ತಮೊದಲ ವ್ಯಾಕರಣ ತಿರುಕ್ಕುರಳ್** FDA 2005

(1) ನನ್ನೂಲ್ (2) ಲೀಲಾತಿಲಕಂ

(3) ತೊಲ್ಕಾಪಿಯಂ (4) ಆಂಧ್ರ ಚಿಂತಾಮಣಿ

**4. ಪೂರ್ವದ ಹಳಗನ್ನಡವು-------- ಭಾಷೆಗೆ ಹತ್ತಿರವಾಗಿದೆ.**

(1) ತಮಿಳು (2) ಸಂಸ್ಕೃತ

(3) ಮಲಯಾಳಮ್ (4) ತೆಲುಗು

**5. ಬ್ರಾಹೂ ಈ ಭಾಷೆಯು ------ ಭಾಷಾ ವರ್ಗಕ್ಕೆ ಸೇರಿದ ಭಾಷೆಯಾಗಿದೆ.** FDA 2005

(1) ಸೈನೊ–ಟಿಬೆಟನ್ (2) ಉತ್ತರ–ದ್ರಾವಿಡ

(3) ದಕ್ಷಿಣ–ದ್ರಾವಿಡ (4) ಆಸ್ಟ್ರೋ–ಏಷಿಯಾಟಿಕ್

**6. ದ್ರಾವಿಡ ಭಾಷೆಗಳಲ್ಲಿ ಅತಿ ಪ್ರಾಚೀನವಾದ ಭಾಷೆ** FDA 2015

(1) ಕನ್ನಡ (2) ಮಲೆಯಾಳಂ

(3) ತಮಿಳು (4) ತೆಲುಗು

**7. ತಮಿಳನ್ನು ಹೊರತು ಪಡಿಸಿದರೆ ಪ್ರಾಚೀನತಮವಾದ ದ್ರಾವಿಡ ಭಾಷೆ ------** FDA 2017

(1) ತೆಲುಗು (2) ಮಲೆಯಾಳಂ

(3) ತುಳು (4) ಕನ್ನಡ

**8. ಕನ್ನಡ ಭಾಷೆಯು ಈ ಭಾಷಾ ವರ್ಗಕ್ಕೆ ಸೇರುತ್ತದೆ.** Group C 2016

(1) ಮಧ್ಯ ದ್ರಾವಿಡ (2) ಇಂಡೋ ಆರ್ಯನ್

(3) ಉತ್ತರ ದ್ರಾವಿಡ (4) ದಕ್ಷಿಣ ದ್ರಾವಿಡ

**9. ಸಂಸ್ಕೃತ ಭಾಷೆಯ ಪ್ರಭಾವ ಅತಿ ಕಡಿಮೆ ಇರುವ ದ್ರಾವಿಡ ಭಾಷೆ** Group C 2017

(1) ಮಲೆಯಾಳಂ (2) ತಮಿಳು

(3) ಕನ್ನಡ (4) ತೆಲುಗು

**10. ಉತ್ತರ ದ್ರಾವಿಡ ಭಾಷಾವರ್ಗಕ್ಕೆ ಸೇರಿದ ಭಾಷೆ** Group C 2017

(1) ಕೊಲಾಮಿ (2) ಕೋತ

(3) ಪೆಂಗೊ (4) ಬ್ರಾಹೂಈ

**11.ಉತ್ತರ ದ್ರಾವಿಡ ಭಾಷೆಗಳಲ್ಲಿ ಸೇರುವ ಭಾಷೆಗಳೆಂದರೆ:** Group C 2017

(1) ಕುಈ, ಕೊಲಾಮಿ, ಕೊಂಡ

(2) ಕನ್ನಡ, ತೆಲುಗು, ತಮಿಳು

(3) ಕುರುಖ್, ಮಾಲ್ತೊ, ಬ್ರಾಹೂಈ

(4) ಸಂಸ್ಕೃತ, ಹಿಂದಿ, ಬಂಗಾಳಿ

**12.'ಕೊಲಾಮಿ' – ಇದು ಯಾವ ಭಾಷಾವರ್ಗಕ್ಕೆ ಸೇರುತ್ತದೆ?** Group C 2021

(1) ದ್ರಾವಿಡ ಭಾಷಾವರ್ಗ (2) ಆಸ್ಟ್ರೇಲಿಯನ್ ಭಾಷಾವರ್ಗ

(3) ನೈಜರ್ ಕಾಂಗೋ ವರ್ಗ (4) ಬಾಸ್ಕ್ ಭಾಷಾವರ್ಗ

**13.ಕನ್ನಡ ಲಿಪಿಯ ಮೂಲ -----** Group C 2016

(1) ಖರೋಷ್ಠಿ (2) ನಾಗರಿ

(3) ಬ್ರಾಹ್ಮಿ (4) ದೇವನಾಗರಿ

**14.ಇವು ದಕ್ಷಿಣ ದ್ರಾವಿಡ ಭಾಷೆಗಳು**

(1) ತೊದ, ಮಲಯಾಳಂ (2) ತಮಿಳು, ಗದಬ

(3) ಪರ್ಜಿ, ಕನ್ನಡ (4) ತೆಲುಗು, ಮುಂಡ

**15.ದೀರ್ಘಕಾಲದಿಂದಲೂ ಭಾರತದಿಂದ ಹೊರಗೆ ವ್ಯವಹಾರದಲ್ಲಿರುವ ದ್ರಾವಿಡ ಭಾಷೆ** Group C 2016

(1) ಕುರುಕ್ (2) ಮಲ್ತೋ

(3) ಬ್ರಾಹೂಈ (4) ಕೋಲಾಮಿ

**16.ಕಾರ್ನ್ ವಾಲೀಸ್ ಕನ್ನಡ ಶಾಸನ ಸಂಪುಟಗಳನ್ನು ಹೊರತಂದಿದ್ದಾರೆ.** FDA 2008

(1) ಇ. ಪಿ. ರೈಸ್ (2) ಬಿ. ಎಲ್. ರೈಸ್

(3) ಕಿಟ್ಟೆಲ್ (4) ಝೀಗ್ಲರ್

**17.ಭಾಷಾ ವಿಜ್ಞಾನದ ಮೂಲತತ್ವಗಳು ಕೃತಿಯನ್ನು ರಚಿಸಿದವರು** FDA 2019

(1) ಕುಶಾಲಪ್ಪ ಗೌಡ (2) ರಾಜೇಶ್ವರಿ ಎಂ

(3) ಡಾ. ಸೌದತ್ತಿ ಮಠ (4) ಚಿದಾನಂದಮೂರ್ತಿ

**18.ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಎಂಬ ಗ್ರಂಥವನ್ನು ಬರೆದರವು.** SDA 2008

(1) ಎಂ, ಚಿದಾನಂದ ಮೂರ್ತಿ (2) ಎಂ.ಎಂ. ಕಲಬುರ್ಗಿ

(3) ಎಂ. ಮರಿಯಪ್ಪಭಟ್ಟ (4) ಎಚ್. ತಿಪ್ಪೇರುದ್ರಸ್ವಾಮಿ

**19.ಕೆಲವು ಕನ್ನಡ ಅಪೂರ್ವ ಪದಗಳ ಅರ್ಥ & ನಿಷ್ಪತ್ತಿಯನ್ನು ಕುರಿತ ಗ್ರಂಥ 'ಶಬ್ದವಿಹಾರ'ದ ಕರ್ತೃ** Group C 2017

(1) ಡಿ.ಎಲ್.ಎನ್ (2) ತೀ.ನಂ.ಶ್ರೀ

(3) ಪು.ತಿ.ನ. (4) ಹಾ.ಮಾ.ನಾ

**20.ದೀರ್ಘಕಾಲದಿಂದಲೂ ಭಾರತದಿಂದ ಹೊರಗೆ ವ್ಯವಹಾರದಲ್ಲಿರುವ ದ್ರಾವಿಡ ಭಾಷೆ** HSTR 2009

**(1) ಬ್ರಾಹೂಈ** (2) ಕೋಲಾಮಿ

(3) ಕುರುಕ (4) ಮಾಲ್ತೋ

**21.ದಕ್ಷಿಣ ದ್ರಾವಿಡ ಭಾಷೆಗಳು ಇವು** KTET 2015

(1) ಕನ್ನಡ, ಸಂಸ್ಕೃತಿ, ತೆಲುಗು, ತಮಿಳು, ತುಳು

(2) ತಮಿಳು, ತೆಲಗು, ತುಳು, ಮರಾಠಿ, ಮಲೆಯಾಳಂ

(3) ಸಂಸ್ಕೃತಿ, ಮರಾಠಿ, ತೆಲಗು, ತುಳು, ಕೊಂಕಣಿ

**(4) ಕನ್ನಡ, ತಮಿಳು, ತೆಲಗು, ಮಲಯಾಳಂ, ತುಳು**

**22. ಕನ್ನಡ ಈ ಭಾಷಾ ವರ್ಗಕ್ಕೆ ಸೇರಿದೆ** Group C 2023

(1) ದಕ್ಷಿಣ ದ್ರಾವಿಡ (2) ಮಧ್ಯದ್ರಾವಿಡ

(3) ಉತ್ತರ ದ್ರಾವಿಡ (4) ಇಂಡೋ ಆರ್ಯನ

**23. ಕನ್ನಡ ಲಿಪಿಯು ಈ ಮೂಲದಿಂದ ಬಂದದ್ದು** ಸ.ಪ್ರಾ.ಶಾ.ಶಿ 2016

(1) ಬ್ರಾಹ್ಮಿ (2) ಸೆಮೆಟಿಯಾ ಲಿಪಿ

(3) ಗ್ರೀಕ್ ಲಿಪಿ (4) ಯವನಾನಿ

| ಉತ್ತರಗಳು | | | | |
|---|---|---|---|---|
| 1) 2 | 2) 2 | 3) 3 | 4) 1 | 5) 2 |
| 6) 3 | 7) 4 | 8) 4 | 9) 2 | 10) 4 |
| 11) 3 | 12) 1 | 13) 3 | 14) 1 | 15) 3 |
| 16) 2 | 17) 4 | 18) 4 | 19) 1 | 20) 1 |
| 21) 4 | 22) 1 | 23) 1 | | |

### ನೆನಪಿಡಿ

**ಕಿರುತೆರೆ ವಾಹಿನಿ**

- **1994** ರಲ್ಲಿ ಕನ್ನಡದ ಮೊದಲ ಕಿರುತೆರೆ ವಾಹಿನಿ **ಡಿಡಿ ಚಂದನ ದೂರದರ್ಶನ** ಪ್ರಾರಂಭ.
- ಸಂಸ್ಕೃತ & ಕನ್ನಡದಲ್ಲಿ ಚಂದನ ಎಂದರೆ **ಶ್ರೀಗಂಧ.**
- ಧ್ಯೇಯವಾಕ್ಯ: **ಇದು ಕನ್ನಡ ವಾಹಿನಿ**

**ಆಕಾಶವಾಣಿ**

- ಆಕಾಶವಾಣಿಯಲ್ಲಿ ಮಾತನಾಡಿದ ಮೊದಲ ಕನ್ನಡಿಗ – **ಡಾಕ್ಟರ್ ಕೆ.ವಿ ಪುಟ್ಟಪ್ಪ** ಅಥವಾ **ಕುವೆಂಪು**
- ರೇಡಿಯೋದ ವಿಷಯದಲ್ಲಿ **"ಆಕಾಶವಾಣಿ"** ಶಬ್ದವನ್ನು **ಎಂ.ವಿ. ಗೋಪಾಲಸ್ವಾಮಿ 1936**ರಲ್ಲಿ ಮೊದಲು

ಅತಿ ಶೀಘ್ರ ಮಾರುಕಟ್ಟೆಯಲ್ಲಿ ಲಭ್ಯ

